## ಅಧ್ಯಾಯ 13

# ಅಬ್ರಹಾಮ ಮತ್ತು ಲೋಟ ಬೇರ್ಪಟ್ಟಿದ್ದು

ಅಬ್ರಹಾಮನು ಐಗುಪ್ತಕ್ಕೆ ಪ್ರವಾಸ ಹೋಗುವ ಹೊತ್ತಿಗೆ ಈಗಾಗಲೇ ಒಬ್ಬ ಶ್ರೀಮಂತ ಮನುಷ್ಯನಾಗಿದ್ದನು (12:5). ಆತನ ವಂಚನೆಯ ಕೃತ್ಯಗಳ ಹೊರತಾಗಿಯೂ, ದೇವರು ಫರೋಹನಿಂದ ಹೇರಳವಾಗಿ ಸಿಕ್ಕಿದ್ದ ಬಹುಮಾನಗಳ ಮೂಲಕವಾಗಿ ಆತನನ್ನು ಇನ್ನಷ್ಟು ಆಶೀರ್ವದಿಸಿದನು (12:16; 24:35). ಹಾಗಿದ್ದರೂ, ಅಬ್ರಹಾಮ ಮತ್ತು ಸಾರಳರು ಐಗುಪ್ತದಿಂದ ಹೊರಡುವಂತೆ ಒತ್ತಾಯಿಸಲ್ಪಟ್ಟಿದ್ದರಿಂದ ಪ್ರಯಾಣವನ್ನು ಮುಂದುವರೆಸಬೇಕಾಗಿತ್ತು.

ಸ್ಪಷ್ಟವಾಗಿರುವಂತೆ, ಅವರು ಕಾನಾನಿಗೆ ಹಿಂದಿರುಗಿ ಪ್ರಯಾಣಿಸುವಿಕೆಯ ವೇಳೆ ಯಾವದೇ ಘಟನೆಗಳು ಸಂಭವಿಸಲಿಲ್ಲ. ಅವರು ದೇಶದ ಗಡಿಗಳ ತನಕವೂ ಅಧಿಕೃತವಾದ ಸರ್ಕಾರಿ ಬೆಂಗಾವಲಿನಲ್ಲಿ ಪ್ರಯಾಣಿಸಿರಬಹುದಾಗಿದೆ. ಅವರನ್ನು ವಾಗ್ದಾನದ ದೇಶದಿಂದ ಹೊರಗೆ ಹೋಗುವಂತೆ ಮಾಡಿದ್ದ ಕ್ಷಾಮದ ಕುರಿತಾಗಿ ಇನ್ನೇನನ್ನೂ ಓದುವದಿಲ್ಲ.

ಅಬ್ರಹಾಮ ಮತ್ತು ಸಾರಳರು ಐಗುಪ್ತವನ್ನು ತೊರೆದು ಬರುವ ವೇಳೆ ಅವರ ಸಂಬಂಧವು ಹೇಗಿತ್ತೆಂಬುದರ ಬಗ್ಗೆ ನಾವು ಚಕಿತಗೊಳ್ಳದೆ ಇರುವದಕ್ಕೆ ಸಾಧ್ಯವಿಲ್ಲ. ಮೂಲಪಿತೃವು ಸ್ವಾರ್ಥದಿಂದ ಮೋಸಗೊಳಿಸಿ ಆಕೆಯನ್ನು ಫರೋಹನಗೆ ಒಪ್ಪಿಸಿ ಕೊಟ್ಟ ನಂತರದಲ್ಲಿ ಈಗಲೂ ಅವರು ಒಬ್ಬರೊಂದಿಗೊಬ್ಬರು ಪರಿಣಾಮಕಾರಿಯಾಗಿ ಸಂವಹನ ನಡಿಸುತ್ತಿದ್ದರೋ?

## ಅಬ್ರಹಾಮನು ಕಾನಾನಿಗೆ ಹಿಂದಿರುಗಿದ್ದು ಮತ್ತು ಲೋಟನ ಸಂಗಡದ ಘರ್ಷಣೆ (13:1-7)

**1ಹೀಗೆ ಅಬ್ರಾಮನು ತನ್ನದನ್ನೆಲ್ಲಾ ತೆಗೆದುಕೊಂಡು ಹೆಂಡತಿಯನ್ನೂ ಲೋಟನನ್ನೂ
ಸಂಗಡ ಕರಕೊಂಡು ಐಗುಪ್ತ ದೇಶವನ್ನು ಬಿಟ್ಟು ಕಾನಾನ್‌ದೇಶದ ದಕ್ಷಿಣ ಪ್ರಾಂತ್ಯಕ್ಕೆ ಏರಿ
ಬಂದನು. 2ಅಬ್ರಾಮನು ಬಹು ಐಶ್ವರ್ಯವಂತನಾಗಿದ್ದನು; ಅವನಿಗೆ ಪಶುಗಳೂ
ಬೆಳ್ಳಿಬಂಗಾರವೂ ಇದ್ದವು. 3ಅವನು ದಕ್ಷಿಣ ದೇಶವನ್ನು ಬಿಟ್ಟು ಮುಂದೆ ಮುಂದೆ ಪ್ರಯಾಣ
ಮಾಡುತ್ತಾ ಬೇತೇಲಿನವರೆಗೆ ಅಂದರೆ 4ಬೇತೇಲಿಗೂ ಆಯಿ ಎಂಬ ಊರಿಗೂ ನಡುವೆ ತಾನು
ಪೂರ್ವದಲ್ಲಿ ಗುಡಾರಹಾಕಿಸಿ ಯಜ್ಞವೇದಿಯನ್ನು ಕಟ್ಟಿದ್ದ ಕ್ಷೇತ್ರಕ್ಕೆ ತಿರಿಗಿ ಬಂದು ಅಲ್ಲಿ
ಯೆಹೋವನ ಹೆಸರನ್ನು ಹೇಳಿಕೊಂಡು ಆರಾಧಿಸಿದನು. 5ಅವನ ಜೊತೆಯಲ್ಲಿದ್ದ ಲೋಟನಿಗೂ
ಕುರಿದನ ಗುಡಾರಗಳಿದ್ದವು. 6ಆ ಸ್ಥಳವು ಅವರಿಬ್ಬರ ಜೀವನಕ್ಕೆ ಸಾಲದೆಹೋಯಿತು. ಅವರಿಬ್ಬರ
ಆಸ್ತಿ ಬಹಳವಾದದರಿಂದ ಒಂದೇ ಸ್ಥಳದಲ್ಲಿ ವಾಸವಾಗಿರುವದು ಅಸಾಧ್ಯವಾಯಿತು. 7ಇದರಿಂದ
ಅಬ್ರಾಮನ ದನಕಾಯುವವರಿಗೂ ಲೋಟನ ದನಕಾಯುವವರಿಗೂ ಜಗಳ ಹುಟ್ಟಿತು. ಇದಲ್ಲದೆ**

**ಕಾನಾನ್ಯರೂ ಪೆರಿಜೀಯರೂ ಆ ಕಾಲದಲ್ಲಿ ದೇಶದೊಳಗೆ ಇದ್ದರು.**

**ವಚನ 1.** ಲೇಖಕನು ಅಷ್ಟಾಗಿ ಬಣ್ಣನೆಯನ್ನು ಮಾಡದೆಯೇ, ಅಬ್ರಹಾಮನು **ಕಾನಾನ್‌ದೇಶದ ದಕ್ಷಿಣ ಪ್ರಾಂತ್ಯಕ್ಕೆ ಏರಿ ಬಂದನು** ಎಂದು ಬರೆಯುತ್ತಾನೆ (12:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆತನ ಜೊತೆಯಲ್ಲಿ ಅವನ **ಹೆಂಡತಿ** ಮತ್ತು ಆತನ ಪರಿವಾರ ಇದ್ದರು, ಹಾಗೂ **ಲೋಟ**ನನ್ನು ವಿಶೇಷವಾದ ರೀತಿಯಲ್ಲಿ ಪ್ರತ್ಯೇಕವಾಗಿ ಪ್ರಸ್ತಾಪಿಸಲಾಗಿದೆ. ಈ ಮುಂಚೆ ಐಗುಪ್ತಕ್ಕೆ ಹೊರಡುವ ವೇಳೆ ಜೊತೆಯಲ್ಲಿ ಲೋಟನು ಇದ್ದನೆಂಬುದಾಗಿ ಪ್ರಸ್ತಾಪಿಸಿಲ್ಲವಾದರೂ, ಆತನು ಅಬ್ರಹಾಮನ ಸಂಗಡ ಐಗುಪ್ತಕ್ಕೆ ಹೋಗಿ ಅಲ್ಲಿಂದ ಅವನ ಸಂಗಡ ಕಾನಾನ್ ದೇಶದ ದಕ್ಷಿಣ ಭಾಗಕ್ಕೆ ಬಂದನು ಎಂಬುದಾಗಿ ವಾಕ್ಯಭಾಗವು ಇಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ. ಇದು ಇವರಿಬ್ಬರ ನಡುವೆ ಶೀಘ್ರದಲ್ಲಿಯೇ ಸಂಭವಿಸಲಿದ್ದ ವಿಭಜನೆಗೆ ವೇದಿಕೆಯನ್ನು ಸಿದ್ಧಗೊಳಿಸುತ್ತದೆ.

**ವಚನ 2.** ಅಬ್ರಹಾಮನು ಐಗುಪ್ತಕ್ಕೆ ಹೋಗುವದಕ್ಕೆ ಮುನ್ನ ಒಬ್ಬ ಶ್ರೀಮಂತ ವ್ಯಕ್ತಿಯಾಗಿದ್ದನು (12:5). ಆತನ ವಂಚನೆಯ ಕೃತ್ಯಗಳ ಹೊರತಾಗಿಯೂ, ದೇವರು ಫರೋಹನಿಂದ ಹೇರಳವಾಗಿ ಸಿಕ್ಕಿದ್ದ ಬಹುಮಾನಗಳ ಮೂಲಕವಾಗಿ ಆತನನ್ನು ಇನ್ನಷ್ಟು ಆಶೀರ್ವದಿಸಿದನು (12:16, 20). ಈ ಹೊತ್ತಿಗಾಗಲೇ, ಅಬ್ರಹಾಮನು **ಬಹು ಐಶ್ವರ್ಯವಂತನಾಗಿದ್ದನು** - ಕೇವಲ **ಅವನಿಗೆ ಪಶುಗಳು** ಮಾತ್ರವೇ ಇರಲಿಲ್ಲ, ಆದರೆ **ಬೆಳ್ಳಿಬಂಗಾರವೂ ಇದ್ದವು** (ನೋಡಿರಿ 24:35).

**ವಚನಗಳು 3, 4.** ಮೂಲಪಿತೃವು ಬಂದ ದಾರಿಯಲ್ಲಿ ಹಿಂದಕ್ಕೆ ಹೆಜ್ಜೆ ಹಾಕಲಾರಂಭಿಸಿದ್ದನು, **ದಕ್ಷಿಣ ದೇಶವನ್ನು ಬಿಟ್ಟು** ಉತ್ತರದ ಕಡೆಗೆ ಮಧ್ಯಭಾಗದ ಪರ್ವತ ದೇಶದ ವರೆಗೂ ಪ್ರಯಾಣಿಸಿ **ಬೇತೇಲಿಗೂ ಆಯಿ ಎಂಬ ಊರಿಗೂ ನಡುವೆ** ಬಂದನು, ಅಲ್ಲಿ ಆತನು ತನ್ನ **ಗುಡಾರ**ವನ್ನು ಹಾಕಿಸಿದನು ಮತ್ತು **ಯಜ್ಞವೇದಿಯನ್ನು** ಕಟ್ಟಿಸಿದನು. ಅಬ್ರಹಾಮನು ಅಷ್ಟು ದೂರದಿಂದ ಈ ಸ್ಥಳಕ್ಕೆ ಬಂದನು ಎಂಬ ವಾಸ್ತವಾಂಶವು ಸೂಚಿಸುವದೇನೆಂದರೆ, ಐಗುಪ್ತದಲ್ಲಿ ನಡೆದ ಅಧ್ವಾನದ ಬಳಿಕ, ಆತನು ದೇವರೊಂದಿಗೆ ಮೊದಲು ತನಗಿದ್ದ ಸಂಬಂಧವನ್ನು ಪುನಃ ಸಂಪಾದಿಸಿಕೊಳ್ಳಲು ಬಯಸಿದ್ದನು. ಆತನು ಅಲ್ಲಿ **ಯೆಹೋವನ ಹೆಸರನ್ನು ಹೇಳಿಕೊಂಡು** ಆರಾಧಿಸಿದನು (12:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆ ಆರಾಧನೆಯಲ್ಲಿ ಯಾವದೇ ಪಶ್ಚಾತ್ತಾಪ ಪಡುವಿಕೆ ಅಥವಾ ತಾನು ಐಗುಪ್ತದಲ್ಲಿ ನಡೆದುಕೊಂಡ ಪಾಪಕರ ವರ್ತನೆಗೋಸ್ಕರ ಕ್ಷಮಿಸುವಂತೆ ದೇವರನ್ನು ಬೇಡಿಕೊಂಡನೋ ಎಂಬುದರ ಬಗ್ಗೆ ಲೇಖಕನು ಏನನ್ನೂ ಬರೆಯುವದಿಲ್ಲ, ಬಹುಶಃ ಆ ವಿಧವಾದ ಊಹಿಸಿಕೊಳ್ಳುವಿಕೆಯು ಇಲ್ಲಿ ಅಗತ್ಯವಿರುತ್ತದೆ.

ಅಬ್ರಹಾಮನನ್ನು ಈ ಮಧ್ಯಭಾಗದ ಪರ್ವತ ದೇಶಕ್ಕೆ ನಡಿಸಿದ ಇನ್ನೊಂದು ಕಾರಣವೆಂದರೆ ಆ ವೇಳೆಯಲ್ಲಿದ್ದ ವರ್ಷದ ಕಾಲಮಾನ ಆಗಿರಬಹುದು. ಶೀತದಿಂದ ಕೂಡಿದ, ತೇವವಾದ ತಿಂಗಳುಗಳಲ್ಲಿ (ಅಕ್ಟೋಬರ್ ತಿಂಗಳಿನಿಂದ ಮಾರ್ಚ್ ವರೆಗೆ), ಹಿಂಡುಗಳು ಮೈದಾನಗಳಲ್ಲಿ ಮೇಯುತ್ತಿದ್ದವು. ಬೇಸಿಗೆಯಿಂದ ಕೂಡಿದ, ಮಳೆಯಿಲ್ಲದ ತಿಂಗಳುಗಳಲ್ಲಿ (ಎಪ್ರಿಲ್ ತಿಂಗಳಿನಿಂದ ಸೆಪ್ಟೆಂಬರ್ ವರೆಗೆ), ಅವುಗಳು ಹುಲ್ಲು ಉಳಿದಿರುತ್ತಿದ್ದ ಎತ್ತರದ ಪ್ರದೇಶಗಳಿಗೆ ಸಾಗುತ್ತಿದ್ದವು ಮತ್ತು ಅಲ್ಲಿ ಬುಗ್ಗೆಗಳು ಹಾಗೂ ಹಳ್ಳಗಳು ಲಭ್ಯವಿರುತ್ತಿದ್ದವು.[1]

**ವಚನ 5.** ಸಮೃದ್ಧಿಯಾದ ಭೌತಿಕ ಆಶೀರ್ವಾದಗಳನ್ನು ಅಬ್ರಹಾಮನು ಮಾತ್ರವೇ ಅನುಭವಿಸಿರಲಿಲ್ಲ; ಆತನ ಸಂಗಡ ಪ್ರಯಾಣಿಸಿದ್ದ, **ಲೋಟ**ನು ಸಹ **ಕುರಿದನ**ಗಳು ಸೇರಿದಂತೆ ಹೇರಳವಾದ ಆಶೀರ್ವದಗಳನ್ನು ಅನುಭವಿಸಿದ್ದನು. ಅದರ ಜೊತೆಗೆ, ಎಷ್ಟೊಂದು

**ಗುಡಾರಗಳು** ಇದ್ದವು ಎಂದು ಪ್ರಸ್ತಾಪಿಸಲ್ಪಟ್ಟಿರುವುದು ಆತನು ಗಂಡುಹೆಣ್ಣು ಸೇವಕರೊಂದಿಗೆ (ಅಬ್ರಹಾಮನ ರೀತಿಯಲ್ಲಿಯೇ; ನೋಡಿರಿ 12:16) ಪ್ರಯಾಣಿಸಿದನು ಎಂಬ ನಿಶ್ಚಯವಾದ ಅನಿಸಿಕೆಯನ್ನು ಮೂಡಿಸುತ್ತದೆ. ಬಹುಶಃ ಮಂದೆಗಳನ್ನು ಕಾಯುವವರಲ್ಲಿ ಅನೇಕರಿಗೆ ಅವರ ಸಂಗಡ ಕುಟುಂಬಗಳು ಇದ್ದವು (ನೋಡಿರಿ 14:16). ಆದದರಿಂದ, ಲೇಖಕನು ಇಬ್ಬರಿಗೂ ಸೇರಿದ್ದ ಐಶ್ವರ್ಯವನ್ನು ಬಣ್ಣಿಸಿದ ಪ್ರಕಾರವಾಗಿ, ಅಬ್ರಹಾಮ ಮತ್ತು ಲೋಟ ಯಾವಾಗಲೂ ಒಟ್ಟಾಗಿ ಪ್ರಯಾಣಿಸುತ್ತಲಿರುವದು ಅಸಾಧ್ಯವಾಗಲಿತ್ತು.

**ವಚನ 6.** ಜನರು ಹಾಗೂ ಪಶುಗಳಿಂದ ಕೂಡಿದ್ದ ಅಷ್ಟೊಂದು ಬೃಹತ್ತಾದ ಪರಿವಾರಗಳು **ಒಂದೇ ಸ್ಥಳದಲ್ಲಿ ವಾಸವಾಗಿರುವದು ಅಸಾಧ್ಯವಾಯಿತು** ಮತ್ತು **ಆ ಸ್ಥಳವು ಅವರಿಬ್ಬರ ಜೀವನಕ್ಕೆ ಸಾಲದೆಹೋಯಿತು** ಯಾಕೆಂದರೆ ಬೃಹತ್ ಪ್ರಮಾಣದಲ್ಲಿ ನೀರು ಹಾಗೂ ಹುಲ್ಲುಗಾವಲು ಅವರಿಗೆ ಅಗತ್ಯವಿತ್ತು. ಸರಳವಾಗಿ ಹೇಳುವದಾದರೆ, ಅವರಿಬ್ಬರು ಒಟ್ಟಾಗಿ ಜೀವಿಸುವದಕ್ಕಾಗದಷ್ಟರ ಮಟ್ಟಿಗೆ ಅಬ್ರಹಾಮ ಮತ್ತು ಲೋಟರ **ಆಸ್ತಿ ಬಹಳವಾಗಿತ್ತು**. ಅನಂತರದಲ್ಲಿ, ಏಸಾವ ಮತ್ತು ಯಾಕೋಬರು ಇದೇ ರೀತಿಯ ಪರಿಸ್ಥಿತಿಯನ್ನು ಎದುರಿಸಿದರು (36:6, 7).

**ವಚನ 7.** ಲೇಖಕನು ಮಧ್ಯದಲ್ಲಿ **ಇದಲ್ಲದೆ ಕಾನಾನ್ಯರೂ ಪೆರಿಜೀಯರೂ ಆ ಕಾಲದಲ್ಲಿ ದೇಶದೊಳಗೆ ಇದ್ದರು** ಎಂಬುದನ್ನು ಸೇರ್ಪಡೆಗೊಳಿಸುತ್ತಾನೆ. ಇದರರ್ಥವು ಅಬ್ರಹಾಮ ಹಾಗೂ ಲೋಟನ **ದನಕಾಯುವವರ** ನಡುವೆ ಮಾತ್ರವೇ ಅಲ್ಲ, ಆದರೆ ಈ ಪ್ರವಾಸಿಗಳು ಹಾಗೂ ದೇಶದಲ್ಲಿನ ಶಾಶ್ವತ ನಿವಾಸಿಗಳ ನಡುವೆ ಜಗಳಗಳು ಆಗುವದನ್ನು ತಪ್ಪಿಸುವದಕ್ಕೆ ಸಾಧ್ಯವಿರಲಿಲ್ಲ ಎಂದಾಗುತ್ತದೆ. ಕಾನಾನ್ ದೇಶದಲ್ಲಿ ಈಗಾಗಲೇ ಜೀವಿಸುತ್ತಿದ್ದ ಜನರಿಗೆ ಈ ಪರದೇಶಸ್ಥರು ತಮ್ಮ ದೇಶದಲ್ಲಿ ಇಷ್ಟೊಂದು ಬೃಹತ್ ಸಂಖ್ಯೆಯ ಜನರು, ಹಿಂಡುಗಳು, ಹಾಗೂ ಮಂದೆಗಳ ಸಮೇತವಾಗಿ ಬರುವದನ್ನು ನೋಡಿದಾಗ ದಿಗಿಲು ಬಿದ್ದಿದ್ದರು ಎಂಬುದರಲ್ಲಿ ಸಂದೇಹವೇ ಇರುವದಿಲ್ಲ. ಅಬ್ರಹಾಮನ ಮತ್ತು ಲೋಟನ ದನಕಾಯುವವರಿಗೂ ಕಾನಾನ್ಯರಿಗೂ ಮತ್ತು ಪೆರಿಜೀಯರಿಗೂ[2] ನಡುವೆ ಘರ್ಷಣೆಗಳು ತಪ್ಪದೆ ಸಂಭವಿಸುವದಕ್ಕೆ ಸಾಧ್ಯವಿತ್ತು. ಅಂತೂ, ದೇಶದಲ್ಲಿ ಮೀತಿ ಮೀರಿ ಮೇಯಿಸಲ್ಪಟ್ಟದ್ದಾಗಿತ್ತು ಮತ್ತು ಆಹಾರ ಹಾಗೂ ನೀರಿಗೋಸ್ಕರ ಹುಲ್ಲುಗಾವಲುಗಳು, ಬಾವಿಗಳು, ಮತ್ತು ಬುಗ್ಗೆಗಳಿಗೆ ಸಾಕಷ್ಟು ಬೇಡಿಕೆ ಇತ್ತು - ಅವುಗಳಲ್ಲಿ ಬಹುಪಾಲನ್ನು ಅಲ್ಲಿನ ನಿವಾಸಿಗಳು ತಮಗೆ ಸೇರಿದವುಗಳೆಂದು ಹಕ್ಕು ಸಾಧಿಸುತ್ತಿದ್ದರು.

"ದನಕಾಯುವವರ" ನಡುವೆ **ದನಗಳ** ಮೇಯಿಸುವದಕ್ಕೆ ಬೇಕಾದ ಭೂಮಿ ಹಾಗೂ ನೀರಿಗೋಸ್ಕರ **ಜಗಳವು** ಸಂಭವಿಸಿರಬಹುದಾಗಿದೆ, ಅನಂತರದ ಕಾಲದಲ್ಲಿ ಇಸಾಕ ಮತ್ತು ಅಬೀಮೆಲೆಕನ ನಡುವೆ ಇದೇ ವಿಷಯಕ್ಕೆ ಜಗಳವುಂಟಾಗಿತ್ತು (26:12-33). 12ನೇ ಅಧ್ಯಾಯದಲ್ಲಿ, ಗಂಡ ಮತ್ತು ಆತನ ಹೆಂಡತಿಯ ನಡುವೆ ಜಗಳವಿತ್ತು, ಮತ್ತು ಈಗ ದೊಡ್ಡಪ್ಪ ಹಾಗೂ ತಮ್ಮನ ಮಗನ ನಡುವೆ ಜಗಳವುಂಟಾಗಿತ್ತು, ಅವರ ವೈಯಕ್ತಿಕ ಸಂಬಂಧಕ್ಕೆ ಗಂಡಾಂತರವನ್ನು ತಂದಿಟ್ಟಿತ್ತು.

## ಅಬ್ರಹಾಮನ ಔದಾರ್ಯದ ಪ್ರಸ್ತಾಪ ಮತ್ತು ಲೋಟನ ತೀರ್ಮಾನ (13:8-13)

**[8]ಹೀಗಿರಲು ಅಬ್ರಾಮನು ಲೋಟನಿಗೆ - ನನಗೂ ನಿನಗೂ, ನನ್ನ ದನಕಾಯುವವರಿಗೂ ನಿನ್ನ ದನಕಾಯುವವರಿಗೂ ಜಗಳವಿರಬಾರದು; ನಾವು ಸಹೋದರರಲ್ಲವೇ. [9]ದೇಶವೆಲ್ಲಾ**

**ನಿನ್ನೆದುರಿಗೆ ಇದೆ; ದಯವಿಟ್ಟು ನನ್ನನ್ನು ಬಿಟ್ಟು ಪ್ರತ್ಯೇಕ ಹೋಗು. ನೀನು ಎಡಗಡೆಗೆ
ಹೋದರೆ ನಾನು ಬಲಗಡೆಗೆ ಹೋಗುವೆನು; ನೀನು ಬಲಗಡೆಗೆ ಹೋದರೆ ನಾನು ಎಡಗಡೆಗೆ
ಹೋಗುವೆನು ಎಂದು ಹೇಳಿದನು. [10]ಲೋಟನು ಕಣ್ಣೆತ್ತಿ ನೋಡಲಾಗಿ ಯೊರ್ದನ್ ಹೊಳೆಯ
ಸುತ್ತಲಿನ ಪ್ರದೇಶವು ಚೋಗರೂರಿನ ತನಕ ಎಲ್ಲಾ ಕಡೆಯಲ್ಲಿಯೂ ನೀರಾವರಿಯ
ಸ್ಥಳವೆಂದು ತಿಳುಕೊಂಡನು. ಯೆಹೋವನು ಸೊದೋಮ್‌ಗೊಮೋರ ಪಟ್ಟಣಗಳನ್ನು
ನಾಶಮಾಡುವದಕ್ಕಿಂತ ಮುಂಚೆ ಆ ಸೀಮೆಯು ಯೆಹೋವನ ವನದಂತೆಯೂ
ಐಗುಪ್ತದೇಶದಂತೆಯೂ ನೀರಾವರಿಯಾಗಿತ್ತು. [11]ಆದದರಿಂದ ಲೋಟನು ಯೊರ್ದನ್ ಹೊಳೆಯ
ಸುತ್ತಣ ಪ್ರದೇಶವನ್ನು ಆದುಕೊಂಡು ಮೂಡಣ ಕಡೆಗೆ ಹೊರಟನು. ಹೀಗೆ ಅವರಿಬ್ಬರೂ
ಪ್ರತ್ಯೇಕವಾದರು; [12]ಅಬ್ರಾಮನು ಕಾನಾನ್‌ದೇಶದಲ್ಲಿ ವಾಸಮಾಡಿದನು; ಲೋಟನು ಯೊರ್ದನ್
ಹೊಳೆಯ ಸುತ್ತಣ ಊರುಗಳಲ್ಲಿ ಗುಡಾರ ಹಾಕಿಸಿ ವಸತಿ ಮಾಡುತ್ತಾ ಸೊದೋಮಿಗೆ ಬಂದನು.
[13]ಆದರೆ ಸೊದೋಮ್ ಪಟ್ಟಣದವರು ದುಷ್ಟರೂ ಯೆಹೋವನಿಗೆ ಮಹಾಪರಾಧಿಗಳೂ ಆಗಿದ್ದರು.**

**ವಚನ 8.** ಅಬ್ರಹಾಮನು ಸಮಸ್ಯೆಯನ್ನು ಶಾಂತಗೊಳಿಸಿ ಸಮಾಧಾನದಿಂದ ಇತ್ಯರ್ಥ ಮಾಡಿಕೊಳ್ಳಲು ದೃಢನಿರ್ಧಾರ ಮಾಡಿಕೊಂಡನು. ಆತನಿಗೆ ಲೋಟನ ಸಂಗಡ ಸೌಹಾರ್ದಯುತ ಸಂಬಂಧಗಳನ್ನಿಟ್ಟುಕೊಳ್ಳುವದರ ಪ್ರಾಮುಖ್ಯತೆಯನ್ನು ಗುರುತಿಸಿದ್ದನು, ಯಾಕೆಂದರೆ ಅವರು ವಿರೋಧಿಗಳ ಮತ್ತು ಬಹುಶಃ ಅವರ ಕಡೆಗೆ ಹಗೆತನ ಹೊಂದಿದ್ದ ಜನರ ಗುಂಪುಗಳ ದೇಶವೊಂದರಲ್ಲಿ ವಾಸಿಸುತ್ತಿದ್ದರು. ಇಲ್ಲಿ ಇಬ್ರಿಯ ಪದವು ಅಸಹಜವಾದ ರೀತಿಯಲ್ಲಿರುತ್ತದೆ: **ನಾವು ಸಹೋದರರಲ್ಲವೇ** ಎಂಬುದರ ಬದಲಾಗಿ, ಅದು ಅಕ್ಷರಶಃ ಹೀಗೆ ಹೇಳುತ್ತದೆ, "ನಾವು ಪುರುಷರು, ಸಹೋದರರು ಅಲ್ಲವೇ" ಎಂದು ಹೇಳುವದಾಗಿದ್ದು, "ಪುರುಷರು" ಮತ್ತು "ಸಹೋದರರು" ಎಂಬವುಗಳು ಏಕಾನ್ವಯದಲ್ಲಿರುತ್ತವೆ. ಈ ಪರಿಭಾಷೆಯು ಈ ವಿಧವಾಗಿ ಸೂಚ್ಯಾರ್ಥವನ್ನು ನೀಡುವದಾಗಿದೆ: "ಸಹೋದರರು ಹಾಗಿರಲಿ, ಪುರುಷರು ಜಗಳಾಡತಕ್ಕದ್ದಲ್ಲ."[3] "ಸಹೋದರರು" (אַחִים, *ಆಕೀಮ*) ಎಂಬ ಪದವನ್ನು ಕಟ್ಟುನಿಟ್ಟಿನ ಅರ್ಥದಲ್ಲಿ ತೆಗೆದುಕೊಳ್ಳಬಾರದು, ಆದರೆ ಬದಲಾಗಿ ಅದನ್ನು "ರಕ್ತಸಂಬಂಧಿಗಳು" (ESV) ಅಥವಾ "ಬಂಧುಗಳು" (NLT) ಎಂದು ಅರ್ಥಮಾಡಿಕೊಳ್ಳತಕ್ಕದ್ದು. ಅಂತೂ, ಲೋಟನು ಅಬ್ರಹಾಮನ ಸಹೋದರನ ಮಗನು, ಮೂಲಪಿತೃವಿನ ತಮ್ಮನಾದ ಹಾರಾನನ ಮಗನಾಗಿದ್ದನು (11:27). ಹಿರಿಯ ವ್ಯಕ್ತಿಯು ತನ್ನ ಕಿರಿಯ ಸಂಬಂಧಿಯೊಂದಿಗೆ ಎದುರಾದ ಸಮಸ್ಯೆಯನ್ನು ಶಾಂತಗೊಳಿಸಿ ಅವರ ನಡುವೆ ಇದ್ದ ಎಲ್ಲಾ **ಜಗಳ**ವನ್ನು ನಿರ್ಮೂಲನೆ ಮಾಡಬೇಕೆಂದು ಬಯಸಿದನು.

ಅಬ್ರಹಾಮನು ತಕ್ಷಣವೇ ಕಾರ್ಯಪ್ರವೃತ್ತನಾಗಿ ಈ ಗಂಡಾಂತರವನ್ನೊಡ್ಡುವ ಸಮಸ್ಯೆಯನ್ನು ಪರಿಹರಿಸುವದಕ್ಕೆ ಮುಂದಾನು, ಇದು ಆತನು ಐಗುಪ್ತದಲ್ಲಿ ನಡೆದುಕೊಂಡ ರೀತಿಗೆ ತದ್ವಿರುದ್ಧವಾಗಿತ್ತು. ಅಲ್ಲಿ ಆತನು ನೈಲ್ ಕಣಿವೆಯಲ್ಲಿ ಜಗಳವನ್ನುಂಟು ಮಾಡಿದ್ದನು, ಈಗಲದರೋ ಆತನು ಹಿಂಸೆಗೆ ತಿರುಗುವದಕ್ಕೆ ಮುನ್ನವೇ ಈ ಅಧಿಕಗೊಳ್ಳುತ್ತಿರುವ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಹಲು ಮುಂದಾದನು. ಐಗುಪ್ತದಲ್ಲಿ, ಆತನು ಸ್ವಾರ್ಥದಿಂದ ನಡೆದುಕೊಂಡಿದ್ದನು; ಆದರೆ ಕಾನಾನಿಗೆ ಹಿಂದಿರುಗಿ ಬಂದ ಬಳಿಕ, ಆತನು ತನಗಿಂತಲೂ ಅಮೋಘವಾದ ಕೊಡುಗೆಯನ್ನು ಲೋಟನಿಗೆ ಕೊಡುವದಾಗಿ ಹೇಳಿದನು. ಅಬ್ರಹಾಮನು ಐಗುಪ್ತದಲ್ಲಾದ ಅಧ್ವಾನದಿಂದಾಗಿ ಏನಾದರೂ ಪಾಠವನ್ನು ಕಲಿತುಕೊಂಡನೋ ಎಂದು ಒಬ್ಬನು ಚಕಿತಗೊಳ್ಳದೆ ಬೇರೆ ದಾರಿಯಿಲ್ಲ; ಆತನು ಬೇತೇಲಿನ ಸಮೀಪವಿರುವ ಯಜ್ಞವೇದಿಗೆ ಹಿಂದಿರುಗಿದ್ದು ಮತ್ತು ದೇವರೊಂದಿಗಿನ ಸಹವಾಸವು (13:4) ಆತನ

ತೀರ್ಮಾನದ ಮೇಲೆ ಪ್ರಭಾವವನ್ನು ಬೀರಿರಬಹುದಾಗಿದೆ.

ತರುವಾಯ, ಅಬ್ರಹಾಮನು ತನ್ನ ಮಗನಾದ ಇಸಾಕನಿಗೆ ಜಗಳಕ್ಕಿಂತಲೂ ಸಮಾಧಾನವನ್ನು ಮಾಡಿಕೊಳ್ಳಲು ಆದ್ಯತೆ ಕೊಡುವ ಎಂಬುದನ್ನು ಕಲಿಸಿ ಕೊಟ್ಟಿರಬಹುದಾಗಿದೆ. ಇಸಾಕನು ಗೆರಾರಿನ ಅರಸನಾದ ಅಬೀಮೆಲೆಕನ ದನಕಾಯುವವರು ಈತನ ಬಾವಿಗಳನ್ನು ನಾವು ನಿರ್ಮಿಸಿದವುಗಳೆಂದು ಹಕ್ಕೊತ್ತಾಯ ಮಾಡಿದಾಗ ಆತನು ಅದಕ್ಕೆ ಪ್ರತಿರೋಧ ತೋರಿಸಲಿಲ್ಲ. ಆತನು ತನಗಿರುವ ನ್ಯಾಯಯುತವಾದ ಹಕ್ಕೊತ್ತಾಯ ಮಾಡಿರಬಹುದಿತ್ತು, ಆದರೆ ಅದು ಹಿಂಸೆಗೆ ದಾರಿ ಮಾಡಿ ಕೊಡುತ್ತಿತ್ತು, ಹೀಗಿರುವಾಗ ಇಸಾಕನು ತನ್ನ ಬಾವಿಗಳನ್ನು ಬಿಟ್ಟು ಕೊಟ್ಟು ಬೇರೆ ಸ್ಥಳದಲ್ಲಿ ಪುನಃ ಬಾವಿಯನ್ನು ಅಗೆಯುವಂತೆ ಅಪ್ಪಣೆ ಕೊಡುವ ಮೂಲಕ ಸಮಾಧಾನದ ದಾರಿಯನ್ನು ಆರಿಸಿಕೊಂಡನು (26:18-22).

**ವಚನ 9.** ಕುಟುಂಬಗಳನ್ನು ಮತ್ತು ಸ್ವತ್ತುಗಳನ್ನು ಹೊಂದಿರುವ ಅಬ್ರಹಾಮ ಹಾಗೂ ಲೋಟರಿಗೆ **ಪ್ರತ್ಯೇಕ ಹೋಗು**ವುದು ಅವಶ್ಯಕವಾಗಿತ್ತಾದ್ದರಿಂದ, ಅಬ್ರಹಾಮನು ಒಂದು ಪ್ರಸ್ತಾಪವನ್ನು ಮುಂದಿಟ್ಟನು. ಯಾವ ದಿಕ್ಕಿಗೆ ಹೋಗಬೇಕು ಮತ್ತು ಕಾನಾನಿನ ಯಾವ ಪ್ರಾಂತ್ಯದಲ್ಲಿ ನೆಲೆಸುವದಕ್ಕೆ ಬಯಸುತ್ತಾನೋ ಅದನ್ನು ಸ್ವತಃ ಆರಿಸಿಕೊಳ್ಳುವಂತೆ ಆತನು ಲೋಟನಿಗೆ ಅವಕಾಶ ಕೊಟ್ಟನು. ಮೂಲಪಿತೃವು ಏನನ್ನೂ ಮುಚ್ಚಿಟ್ಟುಕೊಳ್ಳದೆ ಹೀಗೆ ಹೇಳಿದನು, **ದೇಶವೆಲ್ಲಾ ನಿನ್ನೆದುರಿಗೆ ಇದೆ**. ಆತನು ಲೋಟನಿಗೆ ಹೇಳಿದ್ದೇನೆಂದರೆ, **ನೀನು ಎಡಗಡೆಗೆ ಹೋದರೆ ನಾನು ಬಲಗಡೆಗೆ ಹೋಗುವೆನು; ನೀನು ಬಲಗಡೆಗೆ ಹೋದರೆ ನಾನು ಎಡಗಡೆಗೆ ಹೋಗುವೆನು.**

ಅಂಥ ಹೇಳಿಕೆಯು ವಿಶೇಷವಾಗಿ ಲೋಟನಿಗೆ ಆಶ್ಚರ್ಯವನ್ನುಂಟು ಮಾಡಿರಬಹುದಾಗಿದೆ; ಯಾಕೆಂದರೆ ಮೂಲಪಿತೃವಿನ ಒಂದು ಸಮಾಜದಲ್ಲಿ ಹಿರಿಯ ಸಂಬಂಧಿಗೆ - ತಂದೆಯಾಗಿರಬಹುದು ಅಥವಾ ದೊಡ್ಡಪ್ಪ ಆಗಿರಬಹುದು - ಅಂಥ ತೀರ್ಮಾನವನ್ನು ಮಾಡುವ ಹಕ್ಕು ಇತ್ತು, ಮತ್ತು ಅದಕ್ಕೆ ಗೌರವವನ್ನು ಕೊಡುವದು ಕಿರಿಯನ ಕರ್ತವ್ಯವಾಗಿತ್ತು. ಅದರ ಜೊತೆಗೆ, ಕಾನಾನ್ ದೇಶವನ್ನು ಅಬ್ರಹಾಮನ ಸಂತತಿಯವರಿಗೆ ಕೊಡುವೆನೆಂದು ಯೆಹೋವನು ಈಗಾಗಲೇ ಮಾಡಿರುವಂಥ ಒಂದು ನಿರ್ಣಯವಾಗಿತ್ತು (12:7). ಮೂಲಪಿತೃವು ಸ್ವಾಭಾವಿಕವಾಗಿ ಮತ್ತು ತಾರ್ಕಿಕವಾಗಿ ಈ ದೇಶವು ನನಗೆ ಸೇರಿದ್ದೆಂದು ಹೇಳಿರಬಹುದಿತ್ತು ಹಾಗೂ ಲೋಟನ ಸಂತತಿಯವರು ಮುಂದೆ ಇದನ್ನು ನನ್ನದೆಂದು ಹೇಳಬಾರದೆಂಬುದಕ್ಕಾಗಿ ಅಬ್ರಹಾಮನು ಇದು ನನ್ನ ಸಂತಾನದವರಿಗೆ ಸೇರಿದ್ದೆಂದು ಹಕ್ಕು ಮಂಡಿಸಿರಬಹುದಿತ್ತು.

ಈ ಸಂದರ್ಭದಲ್ಲಿ ಅಬ್ರಹಾಮನಿಗೆ ಯಾವುದು ಸ್ಫೂರ್ತಿ ನೀಡಿತ್ತು? ಒಂದು ಸಾಧ್ಯತೆಯು ಏನೆಂದರೆ ಅಬ್ರಹಾಮನು ತನ್ನ ಕುಟುಂಬವನ್ನು ಆಶೀರ್ವದಿಸುವದಕ್ಕೆ ಪ್ರಯತ್ನಿಸುತ್ತಿದ್ದನು ಎಂಬುದೆ. ದೇವರು ಅಬ್ರಹಾಮನನ್ನು ಕರೆದ ವೇಳೆ, ನೀನು "ಆಶೀರ್ವಾದನಿಧಿಯಾಗಿರು" (12:2) ಎಂದು ಆಜ್ಞಾಪಿಸಿದ್ದನು; ಆದರೆ ಆಶೀರ್ವಾದಗಳ ಬದಲಾಗಿ, ಮೂಲಪಿತೃವು ಸಾರಳ ವಿಷಯಕ್ಕೆ ಸಂಬಂಧಿಸಿದಂತೆ ತಾನು ಮಾಡಿದ ಮೋಸತನದಿಂದಾಗಿ ಫರೋಹನ ಕುಟುಂಬದವರ ಮೇಲೆ "ಶಾಪಗಳನ್ನು" (ಉಪದ್ರವಗಳನ್ನು) ಬರಮಾಡಿದ್ದನು (12:17). ಬಹುಶಃ ಆತನು ಈ ಸಾರಿ ಇದು ತನ್ನ ತಮ್ಮನ ಮಗನಿಗೆ ಅವನಿಗಿಷ್ಟವಾಗಿರುವಂಥ ಯಾವ ಭಾಗವನ್ನಾದರೂ ವಾಗ್ದಾನದ ದೇಶದಲ್ಲಿ ಆರಿಸಿಕೊಳ್ಳುವಂತೆ ಅನುಮತಿಸುವ ಮೂಲಕ ಒಂದು "ಆಶೀರ್ವಾದನಿಧಿ" ಆಗುವ ಸಮಯವೆಂಬುದಾಗಿ ದೃಢನಿರ್ಧಾರ ಮಾಡಿಕೊಂಡಿರಬಹುದಾಗಿದೆ.

ಇನ್ನೊಂದು ವಿಚಾರವು ಏನೆಂದರೆ ಇದು ಅಬ್ರಹಾಮನು ನಂಬಿಕೆಯಿಂದ ನಡೆದುಕೊಂಡ

ಕೃತ್ಯವಾಗಿತ್ತು. ಆತನು ಅಂಥ ಉದಾತ್ತ ಹೃದಯದ ನಿರ್ಣಯವನ್ನು ಲೋಟನಿಗೆ ಬಿಟ್ಟು ಕೊಡುವ ಮೂಲಕ ದೇವರು ತನ್ನ ಯೋಜನೆಗಳು ಮತ್ತು ಉದ್ದೇಶಗಳ ಅನುಗುಣವಾಗಿ ಕಾರ್ಯ ಸಾಧಿಸುವನು ಎಂಬುದಾಗಿ ಆತನಲ್ಲಿ ತನಗಿರುವ ವಿಶ್ವಾಸವನ್ನು ಸೂಚಿಸುವ ರೀತಿಯಾಗಿರಬಹುದಾಗಿದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಅಬ್ರಹಾಮನ ಕುರಿತಾಗಿ ಹೀಗೆ ಹೇಳಿದನು, "ನಂಬಿಕೆಯಿಂದಲೇ ಅವನು ವಾಗ್ದಾತ್ತದೇಶಕ್ಕೆ ಬಂದಾಗ ಅಲ್ಲಿ ಅನ್ಯದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು" (ಇಬ್ರಿಯ 11:9). ಸರಳವಾಗಿ ಹೇಳುವದಾದರೆ, ವಿಶ್ವಾಸಿಗಳ ಪಿತೃವು ಲೋಟನಿಂದ ಆರಿಸಿಕೊಳ್ಳಲ್ಪಡದ ಬೃಹತ್ ಪ್ರಮಾಣದ ಪ್ರಾಂತ್ಯಗಳ ಮೇಲೆ ಶಾಶ್ವತವಾದ ಹಕ್ಕನ್ನು ಮಂಡಿಸಲಿಲ್ಲ. ಆತನು ದೇಶದ ಕುರಿತ ವಾಗ್ದಾನವನ್ನು ತನ್ನ ಚಿತ್ತದ ಪ್ರಕಾರ, ಆತನಿಗೆ ಇಷ್ಟವಾಗುವ ಸಮಯದಲ್ಲಿ ನೆರವೇರಿಸುವಂತೆ ಅಬ್ರಹಾಮನು ದೇವರಿಗೆ ಒಪ್ಪಿಸಿ ಬಿಟ್ಟನಷ್ಟೇ.

**ವಚನ 10. ಲೋಟನು ಕಣ್ಣೆತ್ತಿ ನೋಡಲಾಗಿ ಯೊರ್ದನ್ ಹೊಳೆಯ ಸುತ್ತಲಿನ ಪ್ರದೇಶವು ಚೋಗರೂರಿನ ತನಕ ಎಲ್ಲಾ ಕಡೆಯಲ್ಲಿಯೂ** ಫಲವತ್ತಾಗಿರುವ **ನೀರಾವರಿಯ ಸ್ಥಳವೆಂದು ತಿಳುಕೊಂಡನು**. ಯೋರ್ದನ್ ಕಣಿವೆಯ ವಿಷಯವಾಗಿ, ಒಬ್ಬ ಕಥಾನಿರೂಪಕನು ಅಬ್ರಹಾಮನ ಕಾಲದಲ್ಲಿ ಮತ್ತು ತನ್ನ ವಾಚಕರ ಕಾಲದಲ್ಲಿದ್ದ ಪರಿಸ್ಥಿತಿಗಳ ನಡುವೆ ವಿರುದ್ಧ ಹೋಲಿಕೆಯನ್ನು ಮಾಡುತ್ತಾ ಕಾಲಾನುಕ್ರಮದ ವಿವರಣೆಯನ್ನು ನೀಡುತ್ತಾನೆ; ಆತನು ಹೇಳಿದ್ದೇನೆಂದರೆ **ಯೆಹೋವನು ಸೊದೋಮ್‌ಗೊಮೋರ ಪಟ್ಟಣಗಳನ್ನು ನಾಶಮಾಡುವದಕ್ಕಿಂತ ಮುಂಚೆ** ಈ ರೀತಿಯಾಗಿತ್ತು - ಈ ನಾಶನವು ಅವರ ಮಹಾ ದುಷ್ಟತನದ ಕಾರಣದಿಂದಾಗಿ ಬಂದಿತ್ತು (13:13; 19:1-29). ಯೋರ್ದನ್ ಕಣಿವೆಯ ಕೆಲವೊಂದು ಪ್ರಾಂತ್ಯಗಳಲ್ಲಿ, ಉದಾಹರಣೆಗೆ ಯೆರಿಕೋದಂತಹ ಸ್ಥಳಗಳಲ್ಲಿ ಮಧ್ಯದ ಪರ್ವತ ದೇಶದಲ್ಲಾಗುವ ಮಳೆಯು ಹೊಳೆಗಳಲ್ಲಿ ಸೇರಿಕೊಂಡು ಉಕ್ಕಿ ಹರಿಯುವಂತೆ ಮಾಡುತ್ತಿತ್ತು, ಇದರಿಂದ ಸಮೃದ್ಧವಾದ ಬೆಳೆ ಹಾಗೂ ತರಕಾರಿಗಳು ಬೆಳೆಯುವಂತೆ ಸಹಾಯವಾಗುತ್ತಿತ್ತು; ಹೇಗೂ, ಯೆಹೋವನು ಬಯಲು ಸೀಮೆಗಳಲ್ಲಿದ್ದ ಪಟ್ಟಣಗಳನ್ನು ನಾಶಗೊಳಿಸಿದ ನಂತರ ಬಹಳಷ್ಟು ಪ್ರಾಂತ್ಯವು ತನ್ನ ಫಲವತ್ತತೆಯನ್ನು ಕಳೆದುಕೊಂಡಿತ್ತು (19:1-29). ಹವಾಮಾನ ಮತ್ತು ಭೌಗೋಳಿಕತೆಯಲ್ಲಿ ಕೆಲವೊಂದು ಬದಲಾವಣೆಗಳು ಸಂಭವಿಸಿರಬಹುದಾಗಿದೆ, ಮತ್ತು ಅಬ್ರಹಾಮನ ಕಾಲದಲ್ಲಿ ಆ ಪ್ರಾಂತ್ಯವು ಏಕೆ ಹಸಿರಾಗಿಯೂ ಫಲವತ್ತಾಗಿಯೂ ಇತ್ತೆಂಬುದು ಇವುಗಳಿಂದ ತಿಳಿದು ಬರುತ್ತದೆ.

ಲೋಟನು ಈ ಪ್ರಾಂತ್ಯವನ್ನು ನೋಡಿದಾಗ, ಆತನು ತನ್ನ ಮನಸ್ಸಿನೊಳಗೆ **ಯೆಹೋವನ ವನ** (ಏದೆನಿನ ಪರದೈಸ) ಹೇಗಿದ್ದಿರಬಹುದೆಂದು ಕಲ್ಪಿಸಿಕೊಂಡಿರಬಹುದು: ಪುಷ್ಕಳ ಹಾಗೂ ಫಲಭರಿತ (2:8-14; ನೋಡಿರಿ ಯೆಶಾಯ 51:3; ಯೆಹೆಜ್ಕೇಲ 36:35). ಆತನು ಈ ಚಿತ್ರಣವನ್ನು ಇತ್ತೀಚಿಗೆ ಆತನು **ಐಗುಪ್ತದೇಶಕ್ಕೆ** ಮಾಡಿದ್ದ ಪ್ರಯಾಣದಿಂದ ಕಲ್ಪಿಸಿಕೊಂಡಿರಬಹುದು, ಆತನು ಆಗ ಕ್ಷಾಮದ ವೇಳೆ ಅಬ್ರಹಾಮನ ಮನೆಯವರ ಸಂಗಡ ಪ್ರಯಾಣಿಸಿದ್ದನಷ್ಟೆ.

**ಚೋಗರೂರಿನ ತನಕ** ಎಂಬ ಪದಗುಚ್ಛವು ಕಗ್ಗಂಟನ್ನು ಉಂಟು ಮಾಡುತ್ತದೆ ಯಾಕೆಂದರೆ "ಚೋಗರೂರ" ಅನಿಶ್ಚಿತತೆಯಿಂದ ಕೂಡಿರುತ್ತದೆ. ಅದು ಮೃತ ಸಮುದ್ರದ[4] ದಕ್ಷಿಣದ ತುದಿಯಲ್ಲಿರುವ ಒಂದು ಪಟ್ಟಣ ಆಗಿತ್ತೆಂದು ತೋರುತ್ತದೆ, ಇದು ಸೊದೋಮ ಮತ್ತು ಗೊಮೋರಗಳಿಂದ ಅಷ್ಟೇನೂ ದೂರದಲ್ಲಿರಲಿಲ್ಲ (14:2, 8; 19:22-24, 30).[5]

**ವಚನ 11.** ಲೋಟನು ದೇಶವನ್ನು ಆರಿಸಿಕೊಂಡಿದ್ದು ಆತನ ಕಣ್ಣುಗಳು ಏನು ಕಂಡವೋ

ಅದನ್ನಾಧರಿಸಿತ್ತು. ಆತನು ತನಗೋಸ್ಕರ **ಯೊರ್ದನ್ ಹೊಳೆಯ ಸುತ್ತಣ ಪ್ರದೇಶವನ್ನು ಆದುಕೊಂಡ**ನು ಮತ್ತು ಅಲ್ಲಿ ನೆಲೆಗೊಳ್ಳುವದಕ್ಕಾಗಿ ತನ್ನ ಪರಿವಾರದೊಂದಿಗೆ **ಮೂಡಣ ಕಡೆಗೆ ಹೊರಟ**ನು ಎಂದು ವಾಕ್ಯವು ಹೇಳುತ್ತದೆ. ಲೋಟನು ಎಲ್ಲಿ ನೆಲೆಗೊಂಡನು ಎಂಬ ವಿಷಯದಲ್ಲಿ ಯಾವದೇ ಒಮ್ಮತವು ಮೂಡಿರುವದಿಲ್ಲ; ಕೆಲವೊಂದು ಅಭಿಪ್ರಾಯಗಳೊಳಗೆ ಇವುಗಳು ಸೇರಿರುತ್ತವೆ: ಮೃತ ಸಮುದ್ರದ ಉತ್ತರ, ಪೂರ್ವ, ದಕ್ಷಿಣ, ಮತ್ತು ಪಶ್ಚಿಮ ಭಾಗದಲ್ಲಿ ಎಂಬುದೆ. ಕೆಲವರು ಅಂತಿಮವಾಗಿ ಲೋಟನು ಜೀವಿಸುತ್ತಿದ್ದಂಥ ಸೊದೋಮ್ ಪಟ್ಟಣವು ಸಮುದ್ರದ ಭಾಗವೊಂದರ ತಳದಲ್ಲಿರುತ್ತದೆ ಮತ್ತು ಈ ದಿನ ನೋಡುವದಕ್ಕೆ ಸಾಧ್ಯವಿರುವದಿಲ್ಲ ಎಂದು ನಂಬುತ್ತಾರೆ.[6]

ಈ ವಿಧದಲ್ಲಿ, ಅಬ್ರಹಾಮ ಮತ್ತು ಲೋಟರು **ಪ್ರತ್ಯೇಕವಾದರು**. ಈ ನಿರ್ದಿಷ್ಟ ಕಾಲದಲ್ಲಿ ಕಾನಾನ್ ದೇಶದ ಗಡಿಗಳು ಎಲ್ಲಿದ್ದವು ಎಂಬುದು ಅಸ್ಪಷ್ಟವಾಗಿರುತ್ತದೆ. ಅನಂತರದಲ್ಲಿ, ಮೋಶೆಯ ಕಾಲದಲ್ಲಿ, ವಾಗ್ದಾನ ದೇಶದ ಗಡಿಗಳನ್ನು ಅರಣ್ಯಕಾಂಡ 34:1-12ರಲ್ಲಿ ಯೋರ್ದನ್ ನದಿಯ ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿರುವದಾಗಿ ಬಣ್ಣಿಸಲಾಗಿರುತ್ತದೆ; ಹೇಗೂ, ಆದಿಕಾಂಡ 13ನೇ ಅಧ್ಯಾಯದಲ್ಲಿ "ಕಾನಾನ್‌ದೇಶ" ಕೇವಲ ಯೋರ್ದನ್ ನದಿಯಿಂದ ಪೂರ್ವಕ್ಕೆ ಮಾತ್ರವೇ ಇತ್ತೆಂಬುದಾಗಿ ಕಾಣಿಸುತ್ತದೆ (13:10, 12). ಆದದರಿಂದ, ಲೋಟನು ಪೂರ್ವದ ಕಡೆಗೆ ಪ್ರಯಾಣಿಸಿದ ವೇಳೆ, ಆತನು ಕಾನಾನ್ ದೇಶದ ತುದಿಗೆ ಮತ್ತು ಸಂಭಾವ್ಯವವಾಗಿ ಅದನ್ನು ದಾಟಿ ಹೋಗುವವನಾಗಿದ್ದನು. 10:19ರಲ್ಲಿ, ಸೊದೋಮ ಮತ್ತು ಗೊಮೋರ ಪಟ್ಟಣಗಳು, ಮಾತ್ರವಲ್ಲದೆ ಬಯಲು ಸೀಮೆಯಲ್ಲಿನ ಇತರ ಪಟ್ಟಣಗಳು ಸಹ ದೇಶದ ಮೇರೆಗಳಾಗಿದ್ದವೆಂಬುದು ನಿಶ್ಚಿತವಾಗಿರುತ್ತದೆ. ಲೋಟನು ಮಧ್ಯಭಾಗದ ಪರ್ವತ ದೇಶದಂದ ಪೂರ್ವದ ಕಡೆಗೆ ಹೊರಟಾಗ, ವಾಸ್ತವಿಕದಲ್ಲಿ ಆತನು ವಾಗ್ದಾನ ದೇಶಕ್ಕೆ ವಿಮುಖನಾಗಿದ್ದನು ಮತ್ತು ಕ್ರಮೇಣದಲ್ಲಿ ಯೋರ್ದನ್ ನದಿಯ ಮೂರ್ವ ದಿಕ್ಕಿನಲ್ಲಿ ಆತನ ಸಂತತಿಯವರಾದ ಮೋವಾಬ್ಯರು ಹಾಗೂ ಅಮ್ಮೋನಿಯರ ಸ್ವಾಧೀನಪಡಿಸಿಕೊಳ್ಳಲಿದ್ದ ಸೀಮೆಯ ಕಡೆಗೆ ಪ್ರಯಾಣಿಸುವವನಾಗಿದ್ದನು. ಅಬ್ರಹಾಮನಿಂದ ಪ್ರತ್ಯೇಕವಾಗಿ ಪೂರ್ವಕ್ಕೆ ಸಾಗುವ ಮೂಲಕ, ಲೋಟನು ಯೆಹೋವನ ಆಶೀರ್ವಾದದಿಂದ ದೂರವಾಗಿ ಹೊರಟಿದ್ದನು, ಅದು 14:12 ಮತ್ತು 19:12-26ರಲ್ಲಿ ಸ್ಪಷ್ಟವಾಗುತ್ತದೆ, ಯೆಹೋವನ ಶಾಪವನ್ನು ಆತನು ಬರಮಾಡಿಕೊಂಡನು.

**ವಚನ 12.** ಲೋಟನು ಆಯ್ಕೆ ಮಾಡಿಕೊಂಡಿದ್ದರ ಫಲಿತವಾಗಿ, **ಅಬ್ರಾಮನು ಕಾನಾನ್‌ದೇಶದಲ್ಲಿ ವಾಸಮಾಡಿದನು; ಲೋಟನು ಯೊರ್ದನ್ ಹೊಳೆಯ ಸುತ್ತಣ ಊರುಗಳಲ್ಲಿ ಗುಡಾರ ಹಾಕಿಸಿ ವಸತಿ ಮಾಡುತ್ತಾ** ಇದ್ದನು. ಈ ಸನ್ನಿವೇಶದಲ್ಲಿ "ವಸತಿ ಮಾಡುತ್ತಾ" (יָשַׁב, *ಯಾಶಾಬ*) ಎಂಬ ಪದವು ಅವರಿಬ್ಬರೊಳಗೆ ಒಬ್ಬನಾದರೂ ಶಾಶ್ವತವಾಗಿ ನೆಲೆಗೊಂಡನು ಎಂಬರ್ಥವನ್ನು ಕೊಡುವದಿಲ್ಲ. ಅಬ್ರಹಾಮನು ನಂಬಿಕೆಯಿಂದ ನಡೆಯುವವನಾಗಿ, "ಡೇರೆಗಳಲ್ಲಿ ಇದ್ದುಕೊಂಡು" (ಇಬ್ರಿಯ 11:9) ಸ್ಥಳದಿಂದ ಸ್ಥಳಕ್ಕೆ ಪ್ರಯಾಣಿಸುತ್ತಿದ್ದಾಗ್ಯೂ ಕಾನಾನ್ ದೇಶದಲ್ಲಿ "ವಾಸಮಾಡಿದನು." ಲೋಟನ ವಿಷಯದಲ್ಲಿ ಸಹ ಹಾಗೆಯೇ ಆಗಿತ್ತು, ಆತನು ಒಂದು ಪಟ್ಟಣದಿಂದ ಮತ್ತೊಂದು ಪಟ್ಟಣಕ್ಕೆ ಹೋಗುತ್ತಿದ್ದನು ಮತ್ತು ಕ್ರಮೇಣದಲ್ಲಿ **ಸೊದೋಮಿಗೆ ಬಂದನು.** ಅದಾದ ಬಳಿಕ, ಆತನು ಬಹಳ ಶೀಘ್ರದಲ್ಲಿಯೇ ನಗರ ಜೀವನದಿಂದ ಆಕರ್ಷಿತನಾಗಿದ್ದನು, ಆತನು ಪಟ್ಟಣದೊಳಗೆ ತನ್ನ ಕುಟುಂಬಕ್ಕಾಗಿ ಮನೆಯನ್ನು ನಿರ್ಮಿಸಿಕೊಂಡನು (14:12).

**ವಚನ 13.** ಈ ಹಂತದಲ್ಲಿ, ಲೇಖಕನು ತನ್ನ ವಾಚಕರಿಗಾಗಿ ದೈವಶಾಸ್ತ್ರೀಕ ವಿವರಣೆಯನ್ನು ಮಧ್ಯದಲ್ಲಿ ಸೇರ್ಪಡೆಗೊಳಿಸುತ್ತಾನೆ: **ಆದರೆ ಸೊದೋಮ್ ಪಟ್ಟಣದವರು**

**ದುಷ್ಟರೂ ಯೆಹೋವನಿಗೆ ಮಹಾಪರಾಧಿಗಳೂ ಆಗಿದ್ದರು.** ಈ ಹೇಳಿಕೆಯು ಸೊದೋಮಿನ ಪ್ರಾಂತ್ಯದೊಳಗೆ ಹೋಗಿ ನೆಲೆಸುವದಕ್ಕೆ ಲೋಟನ ಮಾಡಿಕೊಂಡ ಆಯ್ಕೆಯು ಮೂರ್ಖತನದ್ದಾಗಿತ್ತೆಂಬುದಕ್ಕೆ ದೃಷ್ಟಾಂತ ನೀಡುತ್ತದೆ. ಸ್ಪಷ್ಟವಾಗಿರುವಂತೆ, ಆತನು ಯೋರ್ದನ್ ಕಣಿವೆಯಲ್ಲಿ ಆರ್ಥಿಕ ಫಲವತ್ತದ ಆಕರ್ಷಣೆಯು ಅತ್ಯಧಿಕವಾಗಿದ್ದರಿಂದಾಗಿ ಆತನು ಅಂಥ ಒಂದು ಪಾಪಭರಿತ ವಾತಾವರಣದಲ್ಲಿ ಜೀವಿಸುವದರ ಅಪಾಯವನ್ನು ಅಸಡ್ಡೆ ಮಾಡಿದನು. ಸೊದೋಮಿನವರ ಜೀವನ-ಶೈಲಿಯ ಬಣ್ಣನೆಯು ಅವರನ್ನು "ದುಷ್ಟರು" (רַע, *ರಾ*). ಆಗಿದ್ದರೆಂಬುದಾಗಿ ತೋರಿಸಿ ಕೊಡುತ್ತದೆ. ಪ್ರಳಯದ ಮುಂಚೆ ಇದ್ದಂಥ ತಲೆಮಾರಿನವನ್ನು ಬಣ್ಣಿಸುವದಕ್ಕೆ ಇದೇ ಪದವು ಬಳಸಲ್ಪಟ್ಟಿತ್ತು (6:5; 8:21). ಹೇಗೂ, ವಾಕ್ಯವು ಇನ್ನಷ್ಟು ವಿವರಣೆಯನ್ನು ಮಾಡುತ್ತದೆ, ಅವರನ್ನು ಯೆಹೋವನಿಗೆ "ಮಹಾಪರಾಧಿಗಳು" ಆಗಿದ್ದರು ಎಂದು ಕರೆಯುತ್ತದೆ. ಇದು ಈಗಿನ ಜಗತ್ತಿನಲ್ಲಿ ನಿಜಕ್ಕೂ ವಿಚಿತ್ರವೆಂದು ಅನ್ನಿಸಬಹುದು; ಆಧುನಿಕ ಸಮಾಜವು ಇಬ್ಬರು ಪ್ರಾಯಸ್ಥರು ಪರಸ್ಪರ ಸಮ್ಮತಿಯಿಂದ ಏನೇ ಮಾಡಿದರೂ ಅದನ್ನು ತಪ್ಪು ಅಥವಾ "ಪಾಪಭರಿತ" ಎಂದು ಪರಿಗಣಿಸಕೂಡದು ಎಂಬುದಾಗಿ ಹೇಳಿಕೊಳ್ಳುತ್ತದೆ. ಜೊತೆಯ ಮನುಷ್ಯನಿಗೆ ವಿರುದ್ಧವಾಗಿ ಪಾಪ ಮಾಡುವಿಕೆ ಎಂಬುದು ಇರುತ್ತದೆಂದು ಒಪ್ಪಿಕೊಳ್ಳುವಂಥ ಅನೇಕರು ಅಂಥ ಕೃತ್ಯಗಳು ದೇವರ ವಿರುದ್ಧದ ಪಾಪಗಳಾಗಿವೆ ಎಂದು ಹೇಳುವದಕ್ಕೆ ಸಂಕೋಚ ಪಡುತ್ತಾರೆ. ಸೊದೋಮಿನವರ ಹಾಗೂ ಬಯಲು ಸೀಮೆಯಲ್ಲಿದ್ದ ಇತರ ಪಟ್ಟಣಗಳ ದುಷ್ಕೃತ್ಯಗಳ ಬಗ್ಗೆ ಹೆಚ್ಚು ವಿವರಿಸಲಿಲ್ಲ ಯಾಕೆಂದರೆ ದುಷ್ಟ ವಿಕೃತಿಗಳು ಸಂಪೂರ್ಣವಾಗಿ 19ನೇ ಅಧ್ಯಾಯದಲ್ಲಿ ತಿಳಿಸಲ್ಪಟ್ಟಿರುತ್ತವೆ.

## ದೇವರು ದೇಶದ ಕುರಿತಾದ ವಾಗ್ದಾನವನ್ನು ನವೀಕರಿಸಿದ್ದು ಮತ್ತು ಅಬ್ರಹಾಮನ ಪ್ರತಿಕ್ರಿಯೆ (13:14-18)

**[14]ಲೋಟನು ಅಬ್ರಾಮನನ್ನು ಬಿಟ್ಟು ಬೇರೆಯಾದ ನಂತರ ಯೆಹೋವನು ಅಬ್ರಾಮನಿಗೆ -**
**ನೀನಿರುವ ಸ್ಥಳದಿಂದ ದಕ್ಷಿಣೋತ್ತರಪೂರ್ವಪಶ್ಚಿಮಗಳಿಗೆ ಕಣ್ಣೆತ್ತಿ ನೋಡು. [15]ನೀನು ನೋಡುವ**
**ಈ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತವಾಗಿ ಕೊಡುವೆನು. [16]ನಿನ್ನ**
**ಸಂತಾನದವರನ್ನು ಭೂಮಿಯ ಧೂಳಿನಷ್ಟು ಅಸಂಖ್ಯವಾಗಿ ಮಾಡುವೆನು. ಭೂಮಿಯಲ್ಲಿರುವ**
**ಧೂಳನ್ನು ಲೆಕ್ಕಮಾಡುವದಾದರೆ ನಿನ್ನ ಸಂತಾನವನ್ನೂ ಲೆಕ್ಕಿಸಲಾದೀತು. [17]ನೀನೆದ್ದು ಈ**
**ದೇಶದ ಎಲ್ಲಾ ಕಡೆಯಲ್ಲಿಯೂ ತಿರುಗಾಡು; ಇದನ್ನು ನಿನಗೆ ಕೊಡುವೆನು ಎಂದು ಹೇಳಿದನು.**
**[18]ತರುವಾಯ ಅಬ್ರಾಮನು ಅಲ್ಲಿಂದ ಹೊರಟು ಅಲ್ಲಲ್ಲಿ ಗುಡಾರಹಾಕಿಸಿಕೊಳ್ಳುತ್ತಾ**
**ಹೆಬ್ರೋನಿನಲ್ಲಿರುವ ಮಮ್ರೆ ತೋಪಿಗೆ ಬಂದು ಅಲ್ಲೇ ವಾಸಮಾಡಿಕೊಂಡು ಯೆಹೋವನಿಗೆ**
**ಯಜ್ಞವೇದಿಯನ್ನು ಕಟ್ಟಿಸಿದನು.**

ಲೋಟನು ಯೋರ್ದನ್ ಕಣಿವೆಯ ಕಡೆಗೆ ಹೊರಟು ಹೋದ ಬಳಿಕ, ದೇವರು ಅಬ್ರಹಾಮನ ಸಂಗಡ ಪುನಃ ಮಾತಾಡಿದನು. ಆತನು ಈ ಹಿಂದೆ ಅಬ್ರಹಾಮ ಮತ್ತು ಆತನ ಸಂತತಿಯವರಿಗೆ ಅವರ ಸ್ವದೇಶವನ್ನು ಕಾನಾನಿನಲ್ಲಿ ಕೊಡುವೆನೆಂದು ವಾಗ್ದಾನ ಮಾಡಿದ್ದನು (12:7). ಈ ಸಂದರ್ಭದಲ್ಲಿ, ದೇವರು ದೇಶದ ಕುರಿತಾದ ವಾಗ್ದಾನವನ್ನು ಪುನರುಚ್ಚರಿಸಿದನು ಮತ್ತು ಆತನು ಅಬ್ರಹಾಮನಿಗೆ ಅನೇಕ ಸಂತತಿಯವರನ್ನು ನೀಡಿ ಆಶೀರ್ವದಿಸುವನೆಂದು ಹೇಳಿದನು.

**ವಚನಗಳು 14, 15.** ಲೋಟನು ಕಾನಾನಿನ ಮೇರೆ ಹಾಗೂ ಅದರಾಚೆಯಲ್ಲಿ ಫಲವತ್ತಾದ ಭೂಮಿ ಇರುತ್ತದೋ ಎಂಬುದಾಗಿ "ಕಣ್ಣೆತ್ತಿ ನೋಡಿದ್ದನು," ಮತ್ತು ಅದು ಆತನ ಇಂದ್ರಿಯಗಳಿಗೆ ಎಷ್ಟೊಂದು ಆಕರ್ಷಕವಾಗಿತ್ತೆಂದರೆ ಅವನು ಅಲ್ಲಿಗೆ ಹೋಗಿ ವಾಸಿಸಬೇಕೆಂಬ ಒಂದು ಸ್ವಾರ್ಥ ಹಾಗೂ ದುರಂತಕರ ನಿರ್ಣಯವನ್ನು ಮಾಡಿಕೊಂಡಿದ್ದನು (13:10, 11). ಲೋಟನ ನಿರ್ಣಯದ ಬಳಿಕ, **ಯೆಹೋವನು** ಅಬ್ರಹಾನಿಗೆ ಕಾನಾನ್ ದೇಶದ ಆ ಕಡೆಯಲ್ಲಿನ **... ದಕ್ಷಿಣೋತ್ತರಪೂರ್ವಪಶ್ಚಿಮಗಳಿಗೆ** [ನಿನ್ನ] **ಕಣ್ಣೆತ್ತಿ ನೋಡು** ಎಂದು ಆದೇಶಿಸಿದನು. ದೇವರು ಅವನನನ್ನು ತಾನು ಅವನಿಗೋಸ್ಕರ ಮತ್ತು ಅವನ **ಸಂತತಿ**ಗೋಸ್ಕರ ಇಟ್ಟಿರುವ ದೈವಿಕ ಯೋಜನೆಗಳು ಹಾಗೂ ಉದ್ದೇಶಗಳ ಮೇಲೆ ತನ್ನ ತೀರ್ಮಾನಗಳನ್ನು ಆಧಾರಗೊಳಿಸಿಕೊಳ್ಳಬೇಕೆಂದು ಅವನನ್ನು ಮಾರ್ಗದರ್ಶಿಸಿದನು, ಅವನ ಸಂತತಿಯವರು ಈ **ದೇಶ**ವನ್ನು **ಶಾಸ್ವತವಾಗಿ** (עוֹלָם, *ಒಲಾಮ್*) ದೇವರಿಂದ ವರವಾಗಿ ಪಡೆಯಲಿದ್ದರು.

15ನೇ ವಚನದ ಅನುವಾದದಿಂದ ಒಂದು ಗೊಂದಲವು ಉದ್ಭವವಾಗುತ್ತದೆ ಯಾಕೆಂದರೆ ಇದರರ್ಥವು ಅಬ್ರಹಾಮನ ಸಂತತಿಯವರು ದೇಶವನ್ನು "ಶಾಶ್ವತವಾಗಿ," ದೇವರಿಂದ ದೊರಕುವ ಒಂದು ಶರತ್ತುರಹಿತವಾದ ಮತ್ತು ರದ್ದುಗೊಳಿಸಲ್ಪಡಲಾಗದಂಥ ವರವಾಗಿ ಪಡೆದುಕೊಳ್ಳಲಿದ್ದರು ಎಂದಾಗುತ್ತದೆ ಎಂಬುದಾಗಿ ವಿದ್ಯಾರ್ಥಿಗಳು ಅನೇಕ ಸಾರಿ ಯೋಚಿಸುತ್ತಾರೆ. ಅಂತಹ ಒಂದು ಅಭಿಪ್ರಾಯವು ಕ್ರೈಸ್ತರೊಳಗೆ ಸಾಕಷ್ಟು ಪ್ರಮಾಣದಲ್ಲಿ ದೈವಶಾಸ್ತ್ರೀಕವಾದ ವಿವಾದವನ್ನುಂಟು ಮಾಡಿರುತ್ತದೆ ಮತ್ತು ಯೆಹೂದ್ಯರ ಹಾಗೂ ಮಧ್ಯ ಪ್ರಾಚ್ಯದಲ್ಲಿರುವ ಮುಸ್ಲಿಮರ ನಡುವೆ ಗಂಭೀರವಾದ ರಾಜಕೀಯ ಮತ್ತು ಮಿಲಿಟರಿ ಸಮಸ್ಯೆಗಳನ್ನು ಉಂಟು ಮಾಡಿರುತ್ತದೆ. ಕಾನಾನ್ ದೇಶವನ್ನು ಅಬ್ರಹಾಮನ ಸಂತತಿಯವರು (ಇಸ್ರಾಯೇಲ್ಯರು) ಸ್ವಾಧೀನಪಡಿಸಿಕೊಳ್ಳಲಿದ್ದ ಕಾಲದ ದೀರ್ಘತೆಯ ವಿಷಯದಲ್ಲಿ "ಶಾಶ್ವತವಾಗಿ" ಎಂಬುದು ಸಹಾಯಕಾರಿ ಅನುವಾದವಾಗಿರುವದಿಲ್ಲ. *ಒಲಾಮ್* ಎಂಬುದನ್ನು "ಒಂದು ದೀರ್ಘ ಕಾಲದ ತನಕ" ಅಥವಾ "ಯುಗದ ವರೆಗೂ" ಎಂದು ಅನುವಾದಿಸಿದ್ದರೆ ಉತ್ತಮವಾಗಿರುತ್ತಿತ್ತು, ಅದು ಕಾಲದ ಅಂಶವನ್ನು ಅನಿರ್ದಿಷ್ಟವಾಗಿರುವಂತೆ ಮಾಡುತ್ತದೆ.[7] ಯೆಹೋವನಿಗೆ ವಿಧೇಯರಾಗುವದೇ ಇಸ್ರಾಯೇಲ್ಯರು ವಾಗ್ದಾನ ದೇಶವನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಶರತ್ತು ಅಥವಾ ಆಧಾರವಾಗಿತ್ತು ಎಂಬುದನ್ನು ಹಲವಾರು ವಾಕ್ಯಭಾಗಗಳು ಸೂಚಿಸುತ್ತವೆ.

ಪುನಃ ಪುನಃ, ಕಾನಾನ್ ದೇಶವನ್ನು ಪ್ರವೇಶಿಸುವದಕ್ಕೆ ಮುನ್ನ, ದೇವರ ಒಡಂಬಡಿಕೆಯಿಂದ (ದಶಾಜ್ಞೆಗಳು ಸೇರಿದಂತೆ) ಇಸ್ರಾಯೇಲ್ಯರು ವಿಮುಖರಾಗುವದಾದರೆ ಮತ್ತು ಸುಳ್ಳು ದೇವರುಗಳನ್ನು ಆರಾಧಿಸುವದಾದರೆ, ಅವರು ದೇಶವನ್ನು ಕಳೆದುಕೊಳ್ಳುವರು ಎಂಬುದಾಗಿ ಅವರು ಮೋಶೆಯಿಂದ ಎಚ್ಚರಿಸಲ್ಪಟ್ಟರು (ಧರ್ಮೋಪದೇಶಕಾಂಡ 6:10-15; 11:8, 9; 28:15-21, 36, 37, 58-65). ಜನರು ಏನು ಮಾಡತಕ್ಕದ್ದು ಎಂಬುದನ್ನು ಅವರಿಗೆ ನೆನಪಿಸುವದರ ಜೊತೆಗೆ, ಮೋಶೆಯು ದೇವರ ವಾಗ್ದಾನ ಸಕಾರಾತ್ಮಕ ಕೋನದ ಬಗ್ಗೆ ಒತ್ತಿ ಹೇಳಿದನು. ಅವರು ಯೆಹೋವನನ್ನು ಪ್ರೀತಿಸಬೇಕಾಗಿತ್ತು, ಆತನ ಸ್ವರಕ್ಕೆ ವಿಧೇಯರಾಗಬೇಕಿತ್ತು, ಮತ್ತು ಆತನನ್ನು ಬಿಡದೆ ಅಂಟಿಕೊಂಡಿರಬೇಕಿತ್ತು. ಮೋಶೆಯು ಹೇಳಿದ್ದೇನೆಂದರೆ, "ನಿಮ್ಮ ದೇವರಾದ ಯೆಹೋವನನ್ನು ಪ್ರೀತಿಸಿ ಆತನ ಮಾತಿಗೆ ವಿಧೇಯರಾಗಿರ್ರಿ, ಆತನನ್ನು ಹೊಂದಿಕೊಂಡೇ ಇರ್ರಿ. ಯೆಹೋವನು ನಿಮ್ಮ ಪಿತೃಗಳಾದ ಅಬ್ರಹಾಮ್ ಇಸಾಕ್ ಯಾಕೋಬರಿಗೆ ಪ್ರಮಾಣ ಮಾಡಿಕೊಟ್ಟ ದೇಶದಲ್ಲಿ ನೀವು ಬದುಕಿಕೊಳ್ಳುವದಕ್ಕೂ ಬಹುಕಾಲ ಇರುವದಕ್ಕೂ ಆತನೇ ಆಧಾರ" (ಧರ್ಮೋಪದೇಶಕಾಂಡ

30:20).

**ವಚನ 16.** ಈ ವಚನಕ್ಕೆ ಮುಂಚೆ, ಅಬ್ರಹಾಮನ “ಸಂತತಿ” ವಿಷಯವಾಗಿ ನಾವು ನೋಡಿದ ಹೇಳಿಕೆಗಳು ಸಾಮಾನ್ಯ ಸ್ವಭಾವದವುಗಳಾಗಿವೆ. ಪ್ರಾಚೀನ ಕಾಲದಲ್ಲಿ “ದೊಡ್ಡ ಜನಾಂಗ” (12:2) ಕುರಿತಾದ ವಾಗ್ದಾನವು ಮಹತ್ವಪೂರ್ಣವಾಗಿರಲಿಲ್ಲ ಯಾಕೆಂದರೆ ಆ ಮಾತುಗಳಲ್ಲಿ ಒಂದಿಷ್ಟರ ಮಟ್ಟಿಗೆ ಚಿಕ್ಕ ಗುಂಪು ಎಂಬುದಾಗಿ ಯೋಚಿಸಲ್ಪಡಬಹುದಾಗಿತ್ತು. ಹೇಗೂ, ದೇವರು ಇಲ್ಲಿ ಮೂಲಪಿತೃವಿನ ಬೃಹತ್ ಸಂಖ್ಯೆಯನ್ನು ಸೂಚಿಸುವದಕ್ಕಾಗಿ ಒಂದು ಉಪಮೆಯನ್ನು ಬಳಸುತ್ತಾನೆ: ಆತನು ಅಬ್ರಹಾಮನ **ಸಂತಾನದವರನ್ನು** ಯಾರಿಂದಲೂ **ಲೆಕ್ಕ** ಮಾಡುವದಕ್ಕೆ ಸಾಧ್ಯವಾಗದ ರೀತಿಯಲ್ಲಿ **ಭೂಮಿಯ ಧೂಳಿನಷ್ಟು ಅಸಂಖ್ಯವಾಗಿ** ಮಾಡುವೆನು ಎಂಬ ತನ್ನ ಯೋಜನೆಯನ್ನು ತಿಳಿಯಪಡಿಸಿದನು (ನೋಡಿರಿ 15:5; 22:17; 26:4; 28:14; 32:12).

**ವಚನ 17.** ಯೆಹೋವನು ಅಬ್ರಹಾಮನು ಮತ್ತಷ್ಟು ಅಪ್ಪಣೆಯನ್ನು ಕೊಟ್ಟು **ನೀನೆದ್ದು ಈ ದೇಶದ ಎಲ್ಲಾ ಕಡೆಯಲ್ಲಿಯೂ ತಿರುಗಾಡು** ಎಂದನು, ಬಹುಶಃ ಇದು ಪ್ರಾಚೀನ ಮಧ್ಯ ಪ್ರಾಚ್ಯದಲ್ಲಿ ಕೆಲವು ಅರಸರು ಮಾಡುತ್ತಿದ್ದ ರೀತಿಯಲ್ಲಿ ಒಂದು “ಒಡೆತನದ ಸಂಕೇತ” ಆಗಿರುವ ಸಾಧ್ಯತೆಯಿದೆ.[8] ಇದು ಹೇಗೆ ಸಂಭವಿಸಲಿತ್ತು ಎಂಬುದನ್ನು ಯೆಹೋವನು ವಿವರಿಸಲಿಲ್ಲ. ದೇಶವು ಕಾನಾನ್ಯರಿಂದ ಆಕ್ರಮಿಸಿಕೊಳ್ಳಲ್ಪಟ್ಟಿದೆ ಮತ್ತು ಸಾರಳು ಬಂಜೆಯಾಗಿಯೇ ಉಳಿದಿದ್ದಾಳೆ ಎಂಬುದು ಮೂಲಪಿತೃವಿಗೆ ಚೆನ್ನಾಗಿಯೇ ಗೊತ್ತಿತ್ತು. ಆತನು ಬೇರೆ ಏನನ್ನೂ ಮಾಡದೆ ಯೆಹೋವನ ಮುಂದೆ ಕಾದುಕೊಂಡು ನಂಬಿಕೆಯಿಂದ ನಡೆಯುವದನ್ನು ಮುಂದುವರೆಸಬೇಕಾಗಿತ್ತಷ್ಟೆ.

**ವಚನ 18.** ತಿರುಗಾಡಿ ತನ್ನ ಹಕ್ಕನ್ನು ಮಂಡಿಸಿದ ಬಳಿಕ, **ಅಬ್ರಾಮನು ಅಲ್ಲಿಂದ ಹೊರಟು ಅಲ್ಲಲ್ಲಿ ಗುಡಾರಹಾಕಿಸಿಕೊಳ್ಳುತ್ತಾ ಹೆಬ್ರೋನಿನಲ್ಲಿರುವ**[9] **ಮಮ್ರೆ ತೋಪಿಗೆ ಬಂದು ಅಲ್ಲೇ ವಾಸಮಾಡಿಕೊಂಡು** ಇದ್ದನು (ನೋಡಿರಿ 23:19; 25:9). ಮಮ್ರೆ ಎಂಬುದು ಒಬ್ಬ ಅಮೋರಿಯನ ಹೆಸರಾಗಿತ್ತು (14:13), ಆತನು ಅನಂತರದಲ್ಲಿ, ಅವನ ಸಹೋದರರೊಂದಿಗೆ ಸೇರಿಕೊಂಡು ಮೆಸಪೊತಾಮ್ಯದ ನಾಲ್ವರು ಅರಸರನ್ನು ಸೋಲಿಸಿ ಲೋಟ ಹಾಗೂ ಸೊದೋಮಿನ ಜನರನ್ನು ಬಿಡಿಸಿಕೊಂಡು ಬರುವಂತೆ ಅಬ್ರಹಾಮನಿಗೆ ಸಹಾಯ ಮಾಡಿದ್ದನು (14:14-16). ಅಬ್ರಹಾಮನು ಕಾನಾನ್ಯದ ಅನ್ಯಧರ್ಮಿಯ ಜನರೊಳಗೆ ಕೆಲವೊಂದು ಜನರ ಸಂಗಡ ಉತ್ತಮ ಸ್ನೇಹವನ್ನು ಬೆಳೆಸಿಕೊಂಡಿದ್ದನಾದರೂ, ಆತನು ಯಾವದೇ ಅನ್ಯಧರ್ಮಿಯ ಯಜ್ಞವೇದಿಯನ್ನು ಆರಾಧನೆಯ ಸ್ಥಳವನ್ನಾಗಿ ಮಾಡಿಕೊಳ್ಳುವದರಿಂದ ದೂರವಿದ್ದನು. ದೇವರನ್ನು ಆರಾಧಿಸುವದಕ್ಕೆ ಆತನು ಕಾನಾನ್ಯರ ಯಾವದಾದರೊಂದು ಸ್ಥಳವನ್ನು ಹುಡುಕಿಕೊಳ್ಳುವದರ ಬದಲಾಗಿ, ಆತನು **ಯೆಹೋವನಿಗೆ ಯಜ್ಞವೇದಿಯನ್ನು ಕಟ್ಟಿಸಿದನು** - ತಾನು ಈ ಹಿಂದಿನ ಸಂದರ್ಭಗಳಲ್ಲಿ ಮಾಡಿದ ರೀತಿಯಲ್ಲಿಯೇ ಮಾಡಿದ್ದನು (12:7, 8). ತನ್ನನ್ನು ಅಷ್ಟೊಂದು ಸಮೃದ್ಧಿಯಾಗಿ ಆಶೀರ್ವದಿಸಿದಕ್ಕಾಗಿ ಮತ್ತು ಆತನ ಅನೇಕ ಸಂತಾನದವರು ಸ್ವಾಧೀನಪಡಿಸಿಕೊಂಡು, ಅಲ್ಲಿ ಬಹುಸಂತಾನವುಳ್ಳವರಾಗಿ ಹೆಚ್ಚಿ ಅಭಿವೃದ್ಧಿಗೊಳ್ಳುವರು ಎಂದು ಆತನು ವಾಗ್ದಾನ ಮಾಡಿದ್ದಕ್ಕಾಗಿ ದೇವರಿಗೆ ಸ್ತೋತ್ರವನ್ನು ಅರ್ಪಿಸಲು ಬಯಸಿದ್ದನೆಂದು ನಾವು ಊಹಿಸಿಕೊಳ್ಳಬಹುದು.

# ಅನ್ವಯಿಸುವಿಕೆ

**ಆಶೀರ್ವಾದಗಳ “ಅಪಾಯ” (ಅಧ್ಯಾಯ 13)**

ದೇವರು ನೀಡುವ ಸಮೃದ್ಧಿಯಾದ ಒದಗಿಸುವಿಕೆಗಳು ಆಶೀರ್ವಾದಗಳಿಗೆ ನಡಿಸಬಲ್ಲದು ಅಥವಾ ಶಾಪಗಳಿಗೆ ನಡಿಸಬಲ್ಲದು. ಆದಿಯಿಂದಲೇ, ದೇವರು ತನ್ನ ಜನರನ್ನು ಕೇವಲ ಆಶೀರ್ವದಿಸಬೇಕೆಂದಷ್ಟೇ ಬಯಸಿದ್ದನು. ಆತನು ಅವರ ಅಗತ್ಯತೆಗಳನ್ನು ಒದಗಿಸಿ ಕೊಟ್ಟನು, ಅವರಿಗೆ ಸಮೃದ್ಧಿಯನ್ನು ನೀಡಿದನು. ಆತನು ಸುಂದರವಾದ ಜಗತ್ತನ್ನು ನಿರ್ಮಿಸಿ ಅದರೊಳಗೆ ಆದಾಮ ಮತ್ತು ಹವ್ವಳರನ್ನು ಒಂದು ಪರಿಪೂರ್ಣವಾದ ವಾತಾವರಣದಲ್ಲಿ ಇಟ್ಟನು: ದಾರಾಳವಾಗಿ ನೀರು ಹರಿಯುತ್ತಿದ್ದ ಮತ್ತು ಶಾರೀರಿಕ ಜೀವದ ಪೋಷಣೆಗೆ ಅಗತ್ಯವಾದ ಆಹಾರಗೋಸ್ಕರವಾಗಿ ಸಕಲ ವಿಧವಾದ ಮರ ಮತ್ತು ಗಿಡಗಳಿಂದ ಹಸಿರಾಗಿದ್ದಂಥ ಒಂದು ತೋಟದ ಪರದೈಸು. ಅವರಿಗೆ ಒಂದೇ ಒಂದು ಮರದ ಹಣ್ಣು ಮಾತ್ರವೇ ನಿಷೇಧಿಸಲ್ಪಟ್ಟಿತ್ತು: ಒಳ್ಳೇದರ ಕೆಟ್ಟದ್ದರ ಅರಹುನ್ನು ಹುಟ್ಟಿಸುವ ಮರ, ಅದು ಮರಣವನ್ನುಂಟು ಮಾಡುವದೆಂದು ದೇವರು ಎಚ್ಚರಿಕೆ ಕೊಟ್ಟನು. ಹೇಗೂ, ದೇವರ ಹೃದಯದಲ್ಲಿ ಆದಾಮ ಮತ್ತು ಹವ್ವಳರ ವಿಷಯದಲ್ಲಿ ಉತ್ತಮ ಇಂಗಿತಗಳಿರುವದಿಲ್ಲ ಎಂಬುದಾಗಿ ಸರ್ಪವು ಭಾವನೆಯು ಉಂಟಾಗುವಂತೆ ಮಾಡಿತ್ತು. ದೇವರು ಅದನ್ನು ನಮ್ಮಿಂದ ಹಿಂದಕ್ಕೆ ಹಿಡಿದಿಟ್ಟುಕೊಳ್ಳುವ ಮೂಲಕ ಅವರನ್ನು ಅಂತಿಮವಾದ ಆಶೀರ್ವಾದದಿಂದ ವಂಚಿತರನ್ನಾಗಿ ಮಾಡುವ ಉದ್ದೇಶವೇ ಆಗಿರುತ್ತೆಂಬುದಕ್ಕೆ ಪುರಾವೆ ಆಗಿದೆ ಎಂದು ನಂಬಿದರು. ಅವರು ದೇವರಂತಾಗಬೇಕೆಂದು ಬಯಸಿದ್ದರು; ಅವರು ಜ್ಞಾನ, ಅಧಿಕಾರ, ಮತ್ತು ಅಂತಿಮವಾಗಿ ಅದರೊಂದಿಗೆ, ಯಾವದನ್ನೂ ಹಿಂದಕ್ಕೆ ಹಿಡಿದಿಟ್ಟುಕೊಳ್ಳದೆ ಬರುವಂಥ ಸಮೃದ್ಧಿಯನ್ನು ಬಯಸಿದನು.

ಖಂಡಿತವಾಗಿಯೂ, ಒಬ್ಬ ಶಾರೀರಿಕ ಜೀವಿಯಾಗಿ, ಮಾನವನು ಸಕಲ ಆಶೀರ್ವಾದಗಳನ್ನು ಹೊಂದಿರುವವನಾಗಿ ಎಂದಿಗೂ ದೇವರಾಗುವದಕ್ಕೆ ಸಾಧ್ಯವಿಲ್ಲ ಎಂದು ಬಲ್ಲವನಾಗಿದ್ದನು. ಒಂದು ವೇಳೆ ಅಂತಹದ್ದು ಸಾಧ್ಯವಿದ್ದಾಗ್ಯೂ, ಶಾರೀರಿಕ ಸ್ವತ್ತುಗಳು ಮತ್ತು ಆಶೀರ್ವಾದಗಳು ಎಂದಿಗೂ ಶಾಶ್ವತವಾಗಿ ಉಳಿಯುವಂಥ ಸಂತೋಷ, ಸಂತೃಪ್ತಿ, ಅಥವಾ ಹಿತವನ್ನು ಉಂಟು ಮಾಡಲು ಸಾಧ್ಯವೇ ಇಲ್ಲ. ಅದಕ್ಕೆ ಸಂಪೂರ್ಣ ತದ್ವಿರುದ್ಧವೆಂದರೆ, ಮಾನವ ಪ್ರವೃತ್ತಿಯು ಏನೆಂದರೆ, ಒಬ್ಬನಿಗೆ ಅಧಿಕ ಇದ್ದರೆ ಆತನು ಇನ್ನೂ ಹೆಚ್ಚೆಚ್ಚಾಗಿ ಬಯಸುವವನಾಗುತ್ತಾನೆ. ಭೌತಿಕ ಆಶೀರ್ವಾದಗಳಿಗಾಗಿ ಮನುಷ್ಯನಲ್ಲಿರುವ ದಾಹವು ಎಂದಿಗೂ ತೃಪ್ತಿಗೊಳ್ಳಲಾರದು. ಐಶ್ವರ್ಯ ಹಾಗೂ ಸ್ವತ್ತುಗಳು ಅವಶ್ಯಕವಾಗಿ ಕೆಟ್ಟವುಗಳೇನೂ ಅಲ್ಲ; ವಾಸ್ತವಿಕದಲ್ಲಿ, ಅವುಗಳನ್ನು ಒಬ್ಬನ ಕುಟುಂಬದ ಅಗತ್ಯತೆಗಳನ್ನು ಸಂಧಿಸುವದಕ್ಕೆ ಮತ್ತು ನಮ್ಮಷ್ಟು ಅನುಕೂಲವಿಲ್ಲದ ಜನರ ಜೀವಿತಗಳನ್ನು ಆಶೀರ್ವದಿಸುವದಕ್ಕೋಸ್ಕರ ಬಳಸುವದಾದರೆ ಅವುಗಳು ಒಳ್ಳೇವುಗಳಾಗಿರಬಲ್ಲವು. ಹೇಗೂ, ಐಶ್ವರ್ಯ ಮತ್ತು ಸ್ವತ್ತುಗಳ ಮೋಹಕ್ಕೊಳಗಾಗುವ, ಅವುಗಳ ವಿಷಯದಲ್ಲಿ ಸ್ವಾರ್ಥಿಗಳಾಗುವ, ಮತ್ತು ಮುಖ್ಯವಾಗಿ ಒಬ್ಬನು ಏನು ಖರೀದಿಸಬಲ್ಲನು ಹಾಗೂ ಸಂಪಾದಿಸಿಕೊಳ್ಳಬಲ್ಲನು ಎಂಬುದಕ್ಕೋಸ್ಕರವೇ ಜೀವಿಸಬೇಕೆನ್ನುವ ಶೋಧನೆಯು ಸದಾಕಾಲವೂ ಇದ್ದೇ ಇರುತ್ತದಾದ್ದರಿಂದ ಅವುಗಳು ಅಪಾಯಕಾರಿ ಆಗಿರಬಲ್ಲವು.

ಹಣದ ಮೇಲಿನ ಪ್ರೀತಿಯು ಅನೇಕ ಕುಟುಂಬಗಳು ಜಗಳವಾಡುವಂತೆ ಮಾಡಿರುತ್ತವೆ ಮತ್ತು ಜನರಿಗೆ ಸರಿಯಾದ ಆದ್ಯತೆಗಳಿಲ್ಲದ ಕಾರಣ ಮನೆಗಳಲ್ಲಿ ಒಡಕು ಉಂಟಾಗಿರುತ್ತವೆ.

ಹೆಚ್ಚು ಐಶ್ವರ್ಯವನ್ನು ಮತ್ತು ಅದರೊಂದಿಗೆ ಬರುವ ಶಕ್ತಿಯನ್ನು ಸಂಪಾದಿಸಿಕೊಳ್ಳಬೇಕೆಂಬ ಆಶೆಗೆ ಬಿದ್ದವರಾಗಿ ತಮ್ಮ ಜೀವಿತಗಳನ್ನು ಹಾಳು ಮಾಡಿಕೊಂಡಿರುತ್ತಾರೆ; ಅವರ ಗುರಿಗಳನ್ನು ಸಾಧಿಸಿಕೊಳ್ಳುವದಕ್ಕಾಗಿ ಅವರು ಎಷ್ಟೊಂದು ಅನೈತಿಕ ಅಥವಾ ನೀತಿಯಲ್ಲದ ಕೃತ್ಯಗಳನ್ನು ಮಾಡಬೇಕು ಎಂಬುದರ ಬಗ್ಗೆಯೇ ಚಿಂತೆಯನ್ನೇ ಮಾಡುವದಿಲ್ಲ. ಸಾವಿರಾರು ಜನರು ಯುದ್ಧಗಳಲ್ಲಿ ಮರಣಿಸಿರುತ್ತಾರೆ ಯಾಕೆಂದರೆ ಅವರ ನಾಯಕರು ಸಂತೃಪ್ತಿಗೊಳ್ಳುವದಕ್ಕೆ ಸಾಧ್ಯವಿಲ್ಲ ಎಂದು ಕಾಣಿಸುವಂಥ ಐಶ್ವರ್ಯ ಹಾಗು ಅಧಿಕಾರಕ್ಕಾಗಿ ದಾಹಗೊಂಡಿರುತ್ತಾರೆ.

ಪೌಲನು ತಿಮೊಥೆಯನಿಗೆ ಹೀಗೆ ಜ್ಞಾಪಕಪಡಿಸಿದನು, "ನಾವು ಲೋಕದೊಳಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ; ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು. ನಮಗೆ ಅನ್ನವಸ್ತ್ರಗಳಿದ್ದರೆ ಸಾಕು" (1 ತಿಮೊಥೆ 6:7, 8). ಅಪೊಸ್ತಲನು ಮುಂದುವರೆದು ಐಶ್ವರ್ಯಗಳಿಂದಾಗುವ ಅಪಾಯಗಳ ಕುರಿತು ತಿಳಿಸುತ್ತಾನೆ (1 ತಿಮೊಥೆ 6:9). ಜನರ ಜೀವಿತಗಳನ್ನು ಹಾಳು ಮಾಡಿ ನಾಶಗೊಳಿಸುವಂಥದ್ದು ಸ್ವತಃ ಹಣವೇ ಅಲ್ಲ, ಆದರೆ "ಹಣದಾಶೆ"ಯೇ ಆಗಿರುತ್ತದೆಂಬುದಾಗಿ ಹೇಳುತ್ತಾನೆ. ಐಶ್ವರ್ಯಕ್ಕಾಗಿ ಆಶೆ ಪಡುವುದು "ಸಕಲವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತ ನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ" (1 ತಿಮೊಥೆ 6:10; ನೋಡಿರಿ ಮತ್ತಾಯ 6:19-24; ಲೂಕ 12:15-21; 1 ಯೋಹಾನ 2:15-17). ಜ್ಞಾನ, ಅಧಿಕಾರ, ಐಶ್ವರ್ಯ, ಮತ್ತು ಸ್ವತ್ತುಗಳ ಪ್ರೇಮಪಾಶಕ್ಕೊಳಗಾಗುವುದರ ಅಪಾಯವೇ 13ನೇ ಅಧ್ಯಾಯದಲ್ಲಿ ಅಬ್ರಹಾಮ ಹಾಗೂ ಲೋಟರಿಗೆ ಎದುರಾದ ಶೋಧನೆ ಆಗಿರುತ್ತದೆ.

*ಐಶ್ವರ್ಯ ಮತ್ತು ಸ್ವತ್ತುಗಳು ಜಗಳಕ್ಕೆ ನಡಿಸಬಲ್ಲವು* (13:1-7). ಅಬ್ರಹಾಮನು ಐಗುಪ್ತದಿಂದ ಹಿಂದಿರುಗಿ ಬಂದ ಮೇಲೆ, ಆತನು ನಿಜಕ್ಕೂ ಐಶ್ವರ್ಯವಂತನಾಗಿದ್ದನು. ದನಕುರಿಗಳ ಹಾಗು ದಾಸರ ವಿಷಯದಲ್ಲಿ ಆತನು ಈಗಾಗಲೇ ಹಾರಾನಿನಿಂದ ಕಾನಾನಿಗೆ ಪ್ರಯಾಣಿಸುವ ವೇಳೆಯಲ್ಲಿಯೇ ಐಶ್ವರ್ಯವಂತನಾಗಿದ್ದನು ಎಂದು ಬಲ್ಲೆವು, ಯಾಕೆಂದರೆ ಆತನ ಮನೆಯಲ್ಲಿಯೇ ಹುಟ್ಟಿ ಬೆಳೆದಿದ್ದ 318 ಕಾದಾಟ ವೀರರು ಅವನೊಂದಿಗೆ ಇದ್ದರು (14:14). ಸಾರಳು ಈತನ ಹೆಂಡತಿಯಲ್ಲ ಆದರೆ ಈತನ ತಂಗಿಯಾಗಿರುವಳೆಂಬುದಾಗಿ ನಂಬುವಂತೆ ಆತನು ಫರೋಹನನ್ನು ವಂಚಿಸಿದಾಗ್ಯೂ, ತಾನು ಅಬ್ರಹಾಮನಿಗೆ ಬಹುಮಾನವಾಗಿ ಕೊಟ್ಟಿದ್ದ ಜಾನುವಾರು ಮತ್ತು ದಾಸರನ್ನು (ಗಂಡು ಮತ್ತು ಹೆಣ್ಣು), ಜೊತೆಗೆ ಬೆಳ್ಳಿ ಹಾಗೂ ಬಂಗಾರಗಳನ್ನು ಅಬ್ರಹಾಮನು ಐಗುಪ್ತದಿಂದ ಹೊರಗೆ ಹೋಗುವ ವೇಳೆ ಹಿಂದಿರುಗಿ ತೆಗೆದುಕೊಳ್ಳಲಿಲ್ಲ (12:16, 20). ಅಬ್ರಹಾಮನು ಕಾನಾನಿಗೆ ಹಿಂದಿರುಗಿದ ವೇಳೆ "ಬಹು ಐಶ್ವರ್ಯವಂತ" ಆಗಿದ್ದನು ಎಂದು ವಾಕ್ಯವು ಹೇಳುತ್ತದೆ (13:1, 2).

ಅದೇ ರೀತಿಯಲ್ಲಿ ಲೋಟನು ಸಹ ಇಷ್ಟು ವರ್ಷಗಳಲ್ಲಿ ಬಹಳ ಸಮೃದ್ಧಿಗೊಂಡಿದ್ದನು. ಆತನು ಐಗುಪ್ತದಿಂದ ಹಿಂದಿರುಗಿದ ವೇಳೆ, ಆತನಿಗೂ "ಕುರಿದನ ಗುಡಾರಗಳಿದ್ದವು" (13:5). "ಗುಡಾರಗಳು" ಎಂಬ ಪದವು ಆತನ ಜಾನುವಾರುಗಳನ್ನು ನೋಡಿಕೊಳ್ಳುವದಕ್ಕಾಗಿ ಮತ್ತು ಆತನ ಸ್ವತ್ತುಗಳನ್ನು ಕಾಪಾಡುವದಕ್ಕಾಗಿ ಆತನ ಬಳಿಯಲ್ಲಿ ಹಲವಾರು ದಾಸರನ್ನು-ದನಕಾಯುವವರನ್ನು ಹೊಂದಿದ್ದನು ಎಂಬುದನ್ನು ಸೂಚಿಸುತ್ತದೆ. ವಾಸ್ತವಿಕದಲ್ಲಿ, ಈ ಇಬ್ಬರು ವ್ಯಕ್ತಿಗಳ ಹಿಂಡುಗಳು ಮತ್ತು ಮಂದೆಗಳು ಎಷ್ಟೊಂದು ಅಧಿಕವಾಗಿದ್ದವು ಎಂದರೆ "ಆ ಸ್ಥಳವು ಅವರಿಬ್ಬರ ಜೀವನಕ್ಕೆ ಸಾಲದೆಹೋಯಿತು" (13:6). ಇದರಿಂದಾಗಿ "ಅಬ್ರಾಮನ ದನಕಾಯುವವರಿಗೂ ಲೋಟನ ದನಕಾಯುವವರಿಗೂ ಜಗಳ ಹುಟ್ಟಿತು" (13:7). ದೊಡ್ಡಪ್ಪ ಮತ್ತು ಆತನ ತಮ್ಮನ ಮಗನು ಒಟ್ಟಾಗಿ ನೆಲೆಸುವದಕ್ಕೆ ಸಾಧ್ಯವಾಗದೆ ಇದ್ದುದಕ್ಕೆ ಒಂದು

ಸಂಭಾವ್ಯ ಕಾರಣವೆಂದರೆ ಜಾನುವಾರುಗಳು ಮೇಯುವದಕ್ಕಾಗಿ ಲಭ್ಯವಿದ್ದ ಭೂಮಿಯು ಕಾನಾನ್ಯರು ಹಾಗೂ ಪೆರಿಜೀಯರಿಗೆ ಸೀಮಿತವಾಗಿತ್ತೆಂದು ಕಾಣಿಸುತ್ತದೆ, ಅವರೇ ದೇಶದ ಬಹುಪಾಲು ಭಾಗವನ್ನು ಆಕ್ರಮಿಸಿಕೊಂಡವರಾಗಿದ್ದರು (13:7).

ಅಬ್ರಹಾಮ ಮತ್ತು ಲೋಟರು ಆಹಾರ ಹಾಗೂ ನೀರಿನ ಕಾರಣದಿಂದ ಉದ್ಭವವಾದ ಒಂದು ಗಂಭೀರವಾದ ಬಿಕ್ಕಟ್ಟನ್ನು ಎದುರಿಸಿದ್ದರು, ಅದರಿಂದ ಅವರ ಹಿಂಡುಗಳು ಹಾಗೂ ಮಂದೆಗಳ ರೂಪದಲ್ಲಿದ್ದ ಐಶ್ವರ್ಯವು, ಮಾತ್ರವಲ್ಲದೆ ದನಕಾಯುವವರು ಮತ್ತು ಅವರ ಕುಟುಂಬಗಳು ಸಹ ಇಕ್ಕಟ್ಟಿನಲ್ಲಿ ಸಿಲುಕುವಂತಾಗಿತ್ತು. ಇಬ್ಬರು ವ್ಯಕ್ತಿಗಳು ಎಷ್ಟರ ಮಟ್ಟಿಗೆ ಜಗಳದಲ್ಲಿ ವೈಯಕ್ತಿಕವಾಗಿ ತೊಡಗಿಸಿಕೊಂಡಿದ್ದರು ಎಂಬುದನ್ನು ವಾಕ್ಯವು ತಿಳಿಸುವದಿಲ್ಲ; ಆದರೆ ಜಗಳವು ಹಿಂಸಾಚಾರಕ್ಕೆ ತಿರುಗಿಕೊಂಡಿದ್ದರೆ ಪರಿಸ್ಥಿತಿಯು ಅವರಿಬ್ಬರಿಗೂ ವೈಯಕ್ತಿಕವಾಗಿ, ಮಾತ್ರವಲ್ಲದೆ ಅವರ ದಾಸರಿಗೂ ವಿನಾಶಕಾರಿ ಪರಿಣಾಮಗಳನ್ನುಂಟು ಮಾಡಿರುತ್ತಿತ್ತು. ಪರದೇಶದಿಂದ ಬಂದ ಎರಡು ಗುಂಪುಗಳ ನಡುವಿನ ಅಂತಹ ವೈರತ್ವವು ಅವರು ಕಾನಾನ್ಯರಿಂದ ಮತ್ತು ಪೆರಿಜೀಯರಿಂದ ಆಕ್ರಮಣಕ್ಕೊಳಗಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತಿತ್ತಷ್ಟೆ. ಸಂಭಾವ್ಯ ವೈರಿಗಳ ವಿರುದ್ಧವಾಗಿ ಒಗ್ಗಟ್ಟಾಗಿ ನಿಲ್ಲದೆ ಹೋದರೆ, ಇವರು ಸೋಲಿಸಲ್ಪಡುತ್ತಿದ್ದರು.

"ಜಗಳ" ಶರೀರಭಾವದ ಕರ್ಮವಾಗಿರುತ್ತದೆ ಇದು "ಹೊಟ್ಟೇಕಿಚ್ಚು," "ಹಗೆತನ," ಮತ್ತು "ಸಿಟ್ಟು" ಇವುಗಳ ಜೊತೆಯಲ್ಲಿ ಪಟ್ಟಿ ಮಾಡಲ್ಪಟ್ಟಿರುತ್ತದೆ (ಗಲಾತ್ಯ 5:20). ಈ ಗುಣಸ್ವಭಾವಗಳು ಆತ್ಮನ ಫಲಕ್ಕೆ ಬಹು ಸ್ಪಷ್ಟವಾದ ರೀತಿಯಲ್ಲಿ ತದ್ವಿರುದ್ಧವಾಗಿರುತ್ತದೆ (ಗಲಾತ್ಯ 5:22, 23), ಅದರೊಳಗೆ ಪ್ರೀತಿಯು ಅಗ್ರಸ್ಥಾನದಲ್ಲಿದೆ. ಜ್ಞಾನೋಕ್ತಿಗಳಲ್ಲಿ ಜ್ಞಾನಿಯು ಇದೇ ರೀತಿಯ ಅಭಿಪ್ರಾಯನ್ನು ತಿಳಿಸುವವನಾಗಿ, ಆತನು ಹೀಗೆ ಹೇಳಿದನು, "ದ್ವೇಷವು ಜಗಳಗಳನ್ನೆಬ್ಬಿಸುತ್ತದೆ; ಪ್ರೀತಿಯು ಪಾಪಗಳನ್ನೆಲ್ಲಾ ಮುಚ್ಚುತ್ತದೆ" (ಜ್ಞಾನೋಕ್ತಿ 10:12) ಮತ್ತು "ಆಸೆಬಡುಕನು ಜಗಳವನ್ನೆಬ್ಬಿಸುವನು" (ಜ್ಞಾನೋಕ್ತಿ 28:25). ಶಾಸ್ತ್ರಗಳು ಸ್ಪಷ್ಟವಾಗಿ ಕಲಿಸುವದೇನೆಂದರೆ ಪ್ರೀತಿಯಿಲ್ಲದಿರುವದೇ ಹೊಟ್ಟೇಕಿಚ್ಚು, ಹಗೆತನ, ಸಿಟ್ಟುಗಳಂತಹ ಶರೀರಭಾವದ ಪಾಪಗಳ ಹಿಂದಿರುವ ಕಾರಣ; ಈ ಮನೋಭಾವಗಳು ಜಗಳಕ್ಕೆ ದಾರಿ ಮಾಡುತ್ತವೆ ಮತ್ತು ಎಲ್ಲಾ ಮಾನವ ಸಂಬಂಧಗಳಲ್ಲಿ ಅಡಚಣೆಯನ್ನುಂಟು ಮಾಡುತ್ತವೆ.

*ನಂಬಿಕೆಯಿಂದ ನಡೆಯುವವರು ತಮ್ಮ ಕೃತ್ಯಗಳ ಮೂಲಕವಾಗಿ ಉದಾತ್ತ ಹೃದಯದಿಂದ ಸಮಾಧಾನಗೊಳಿಸುವವರು ಆಗಿರಬಲ್ಲರು* (13:8, 9). ಅಬ್ರಹಾಮನು ತೊಂದರೆಯುಂಟು ಮಾಡುವವನಾಗಿ ಇರುವದರ ಬದಲಾಗಿ ಸಮಾಧಾನಗೊಳಿಸುವ ವ್ಯಕ್ತಿಯಾಗಿರುವದಕ್ಕೆ ನಿರ್ಧರಿಸಿಕೊಂಡನು, ಆದರೆ ಆತನ ನಿರ್ಧಾರವು ದುಬಾರಿಯಾಗಿತ್ತು. ಲೋಟನ ದೊಡ್ಡಪ್ಪನಾಗಿ, ಆತನು ಈ ಕಿರಿಯನಿಗೆ ಅಪ್ಪನ ಸ್ಥಾನದಲ್ಲಿದ್ದವನಾಗಿದ್ದನು, ಈತನು ಅವನ ಸತ್ತು ಹೋಗಿದ್ದ ತಮ್ಮನ ಮಗನಾಗಿದ್ದನು. ಆತನಿಗಿದ್ದ ಸ್ಥಾನವು ಅವನಿಗೆ ಮತ್ತು ಅವನ ಪರಿವಾರದವರು ಆಕ್ರಮಿಸಿಕೊಳ್ಳಲು ಅಗತ್ಯವಾದ ಭೂಮಿಯನ್ನು ಆರಿಸಿಕೊಳ್ಳುವ ಹಕ್ಕನ್ನು ಕೊಟ್ಟಿತ್ತಾದರೂ, ಅಬ್ರಹಾಮನು ಸದ್ಗುಣತೆಯಿಂದ ಇದು ವರೆಗೂ ಕೇಳಿರದಂತ ಸಂಗತಿಯೊಂದನ್ನು ಮಾಡಿದನು; ಆತನು ಮೊದಲು ಆರಿಸಿಕೊಳ್ಳುವದಕ್ಕೆ ತನಗಿರುವ ಹಕ್ಕನ್ನು ತ್ಯಜಿಸಿದನು, ದೊಡ್ಡ ಮನಸ್ಸಿನಿಂದ ಲೋಟನಿಗೆ ಆರಿಸಿಕೊಳ್ಳುವ ಅವಕಾಶ ನೀಡಿದನು.

ಅಬ್ರಹಾಮನು "ನನಗೂ ನಿನಗೂ ... ಜಗಳವಿರಬಾರದು" (13:8) ಎಂದು ಹೇಳಿದ ವೇಳೆ, "ಜಗಳ" ಎಂಬುದನ್ನು ಅನುವಾದಿಸಿರುವ ಪದವು מְרִיבָה (*ಮೆರಿಬಾಹ*). ಅರಣ್ಯದಲ್ಲಿ ಕುಡಿಯುವದಕ್ಕೆ ನೀರು ಸಿಕ್ಕದೆ ಇದ್ದಂಥ ಸಂದರ್ಭದಲ್ಲಿ ಅಲ್ಲಿ ನಡೆದ ಘಟನೆಯ ನಿಮಿತ್ತವಾಗಿ

ನೋಡುವದಾದರೆ, ಈ ಪದವು ಅನಂತರದಲ್ಲಿನ ಇಸ್ರಾಯೇಲ್ಯ ಶ್ರೋತೃಗಳಿಗೆ ವಿಶೇಷವಾದ ಮಹತ್ವವನ್ನು ಹೊಂದಿರಬಹುದಾಗಿದೆ. ಜನರು ತಮ್ಮ ಜನರು ಅಲ್ಲಿ ಮೋಶೆಯ ವಿರುದ್ಧ"ವ್ಯಾಜ್ಯ" (רִיב, *ರಿಬ*), ಅಥವಾ ಜಗಳ ಮಾಡುವ ಮೂಲಕ ದೇವರನ್ನು ಪರೀಕ್ಷೆ ಮಾಡಿದರು ಎಂಬುದಾಗಿ ವಿಮೋಚನಕಾಂಡ 17:7 ಹೇಳುತ್ತದೆ. *ಮೆರಿಬಾಹ* ಎಂಬುದು ಯೆಹೋವನೊಂದಿಗೆ ಇಸ್ರಾಯೇಲ್ಯರು ಹೊಂದಿದ್ದ ಜಗಳವನ್ನು ಸೂಚಿಸುವದಕ್ಕೆ ಸಹ ಬಳಸಿದ ಪದವಾಗಿದೆ. ಇದು ಆತನೊಂದಿಗಿರುವ ಒಂದು ಬಲವಾದ ವ್ಯಾಜ್ಯ ಅಥವಾ ತೀಕ್ಷ್ಣವಾದ ಹಗೆತನ ಎಂಬ ವಿಚಾರವನ್ನು ಸೂಚಿಸುತ್ತದೆ. ಕೀರ್ತನೆಗಾರನು ಅದಕ್ಕೆ ಕಾರಣವು ಅವರ ಹೃದಯದ ಕಾಠಿಣ್ಯತೆಯೇ ಆಗಿದ್ದು ಅವರು ಆ ವಿಧದಲ್ಲಿ ನಡೆದುಕೊಂಡರೆಂದು ಹೇಳುತ್ತಾನೆ (ಕೀರ್ತನೆ 95:8). ಅಬ್ರಹಾಮನು ತನ್ನ ದನಕಾಯುವವರು ಮತ್ತು ಲೋಟನ ದನಕಾಯುವವರ ನಡುವಿನ ತೀಕ್ಷ್ಣವಾದ ಜಗಳವು ಮುಂದೆ ಹಿಂಸಾಚಾರಕ್ಕೆ ತಿರುಗಬಲ್ಲದು ಎಂಬುದನ್ನು ಗ್ರಹಿಸಿಕೊಂಡನು, ಆದ್ದರಿಂದ ಅವನು ಅದು ಸಂಭವಿಸಕೂಡದೆಂದು ತ್ವರಿತವಾಗಿ ಕಾರ್ಯಪ್ರವೃತ್ತನಾದನು.

ಅಬ್ರಹಾಮನು ಸ್ವಾರ್ಥದಿಂದ ನಡೆದುಕೊಂಡು ತನ್ನ ಇಷ್ಟದಂತೆಯೇ ಆಗಬೇಕೆಂದು ಬಯಸುವದಕ್ಕಿಂತಲೂ ಸಹೋದರರೊಳಗೆ ಸಮಾಧಾನವು ಹೆಚ್ಚು ಪ್ರಾಮುಖ್ಯವಾದದ್ದೆಂಬದು ದೃಢನಿರ್ಧಾರ ಮಾಡಿಕೊಂಡನು. ಇದನ್ನೇ ಯೇಸುವು ಅನಂತರದಲ್ಲಿ ತನ್ನ ಜೀವಿತದೊಳಗೆ ತೋರಿಸಿ ಕೊಟ್ಟಿದ್ದನು, ಮತ್ತು ಒಂದು ಪಂಗಡದ ಮನೋಭಾವದೊಂದಿಗೆ ಹೋರಾಟವನ್ನು ನಡಿಸಿದ್ದ ಫಿಲಿಪ್ಪಿಯಲ್ಲಿನ ಕೆಲವೊಬ್ಬ ಕ್ರೈಸ್ತರೊಳಗೆ ಇದೇ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಪೌಲನು ಪ್ರೋತ್ಸಾಹಿಸಿದನು. ಒಬ್ಬರನ್ನೊಬ್ಬರು ಪ್ರೀತಿಸಬೇಕು, ಅವರ ಉದ್ದೇಶವು ಒಂದೇ ಆಗಿರಬೇಕೆಂದು, ಮತ್ತು "ಪಕ್ಷಪಾತದಿಂದಾಗಲಿ ಒಣಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ" ಇರಬೇಕೆಂದು ಅವರನ್ನು ಆತನು ಬೇಡಿಕೊಂಡನು (ಫಿಲಿಪ್ಪಿ 2:3). ಅಷ್ಟುಮಾತ್ರವಲ್ಲದೆ, ಅವರು ಮುಖ್ಯವಾಗಿ "ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ" ಎಂದು ಬುದ್ಧಿವಾದ ಹೇಳಿದನು (ಫಿಲಿಪ್ಪಿ 2:4). ಆತನು ಯೇಸುವಿನ ದೀನತೆ ಹಾಗೂ ಸ್ವಾರ್ಥರಹಿತತೆಯ ಅಂತಿಮವಾದ ಮಾದರಿಯನ್ನು ಬಳಸುತ್ತಾ, ಕ್ರಿಸ್ತನು ದೇವರಿಗೆ ಸರಿಸಮಾನನೆಂಬ ಪದವಿಯನ್ನು ಹಿಡಿದಿಟ್ಟುಕೊಳ್ಳಲು ಅಪೇಕ್ಷಿಸಲಿಲ್ಲ ಎಂಬುದಾಗಿ ಹೇಳಿದನು. ಪರಲೋಕದಲ್ಲಿ ತನಗಿದ್ದ ಸವಲತ್ತುಗಳನ್ನು, ಅಧಿಕಾರ, ಮತ್ತು ಮಹಿಮೆಗಳನ್ನು ತೆಗೆದಿಟ್ಟವನಾಗಿ, ಕ್ರಿಸ್ತನು ಭೂಮಿಗೆ ಒಬ್ಬ ಮನುಷ್ಯನಾಗಿ ಇಳಿದು ಬಂದನು ಮತ್ತು ಎಲ್ಲಾ ಮಾನವರ ಪಾಪಗಳಿಗೋಸ್ಕರ ಶಿಲುಬೆಯ ಮೇಲೆ ಮರಣಿಸುವದಕ್ಕೆ ಮನಸ್ಸುಳ್ಳವನಾಗಿದ್ದನು (ಫಿಲಿಪ್ಪಿ 2:5-8; ನೋಡಿರಿ 1 ಯೋಹಾನ 2:1, 2).

*ನೋಡುವವರಾಗಿ ನಡೆಯುವವರು ಅನೇಕ ಸಾರಿ ಸುಲಭವಾಗಿ ವಂಚನೆಗೊಳಗಾಗುತ್ತದೆ ಮತ್ತು ದುರಂತದೊಳಗೆ ನಡಿಸಲ್ಪಡುವರು* (13:10-13). ಲೋಟನು ಅಬ್ರಹಾಮನಿಗಿಂತಲೂ ಬಹಳ ವ್ಯತ್ಯಾಸವಾದ ಮನುಷ್ಯನಾಗಿದ್ದನು; ಆತನ ದೊಡ್ಡಪ್ಪನು ಸಮಾಧಾನಪಡಿಸುವವನು ಆಗಿದ್ದರೆ, ಲೋಟನು ಬಹಳ ಮಟ್ಟಿಗೆ ಒಬ್ಬ ತೊಂದರೆ ಕೊಡುವವನಾಗಿ ಮುಂದಿಡಲ್ಪಟ್ಟಿದ್ದಾನೆ. ಕನಿಷ್ಠ, ಆತನ ಮಿಕ್ಕ ಜೀವಿತ ಕಾಲವೆಲ್ಲಾ ಎಲ್ಲಿಯೇ ಹೋದರೂ ಅವನಿಗೆ ತೊಂದರೆಯು ಎದುರಾಗುತ್ತಿತ್ತು. ಲೋಟನು ದುಷ್ಟನಾಗಿರಲಿಲ್ಲ; ಅದಕ್ಕೆ ತದ್ವಿರುದ್ಧವೆಂದರೆ, ಆತನು ಸೊದೋಮಿನ ದುಷ್ಟ ಜನರಿಗೆ ಹೋಲಿಸುವಾಗ "ನೀತಿವಂತನು" ಎಂದು ಬಣ್ಣಿಸಲ್ಪಟ್ಟಿರುತ್ತಾನೆ (2 ಪೇತ್ರ 2:7-9). ಹೇಗೂ, ಲೋಟನು ಸಾಲುಸಾಲಾಗಿ ಕೆಟ್ಟ ತೀರ್ಮಾನಗಳನ್ನು ಮಾಡಿಕೊಂಡನು, ಮತ್ತು ಆ ತೀರ್ಮಾನಗಳನ್ನು ಮಾಡುವದಕ್ಕೆ ಕಾರಣವೆಂದರೆ ಅವನ

ಹೃದಯವು ಇಬ್ಭಾಗವಾಗಿತ್ತು. ಆತನು "ದೇವರನ್ನೂ ಧನವನ್ನೂ" ಒಟ್ಟಿಗೆ ಸೇವಿಸುವದಕ್ಕೆ ಪ್ರಯತ್ನಿಸಿದನೆಂಬುದು ಸ್ಪಷ್ಟವಾಗಿರುತ್ತದೆ (ಮತ್ತಾಯ 6:24), ಮತ್ತು ಫಲಿತವು ಏನಾಗಿತ್ತದೆಂದರೆ ಆತನು "ಕಣ್ಣಿನಾಶೆಗೆ" ಬಲಿಯಾಗಿದ್ದನು (1 ಯೋಹಾನ 2:16).

ಲೋಟನ ಕುರಿತಾದ ಇಂತಹ ಮೌಲ್ಯಮಾಪನವು ನಿಖರವಾಗಿರತಕ್ಕದ್ದು, ಯಾಕೆಂದರೆ ವಾಕ್ಯವು ನಮಗೆ "ಲೋಟನು ಕಣ್ಣೆತ್ತಿ ನೋಡಲಾಗಿ ಯೊರ್ದನ್ ಹೊಳೆಯ ಸುತ್ತಲಿನ ಪ್ರದೇಶವು ಚೋಗರೂರಿನ ತನಕ ಎಲ್ಲಾ ಕಡೆಯಲ್ಲಿಯೂ ನೀರಾವರಿಯ ಸ್ಥಳವೆಂದು ತಿಳುಕೊಂಡನು … ಯೆಹೋವನ ವನದಂತೆಯೂ … ನೀರಾವರಿಯಾಗಿತ್ತು" ಎಂಬಂತೆ ಕಂಡನು ಎಂದು ತಿಳಿಸುತ್ತದೆ (13:10). ದೇಶದಲ್ಲಿನ ಹಸಿರಾದ ಫಲವತ್ತತೆಯ ಆಕರ್ಷಣೆಯನ್ನು ಎದುರಿಸುವದಕ್ಕೆ ಆತನಿಗಾಗಲಿಲ್ಲ, ಆದ್ದರಿಂದ ಅವನು "ಸುತ್ತಣ ಊರುಗಳಲ್ಲಿ ಗುಡಾರ ಹಾಕಿಸಿ ವಸತಿ ಮಾಡುತ್ತಾ ಸೊದೋಮಿಗೆ ಬಂದನು" (13:12). ಯೋರ್ದನ್ ಕಣಿವೆಯಲ್ಲಿ ವಾಸಿಸುತ್ತಿದ್ದ ಜನರು ಯಾವ ರೀತಿಯವರು ಅಥವಾ ಭಕ್ತಿವಂತರಾಗಿ ಜೀವಿಸುವದಕ್ಕೆ ತೀರ್ಮಾನಿಸಿಕೊಂಡಿರುವ ವಿಶ್ವಾಸಿ ಜನರ ಕಡೆಗೆ ವೈರತ್ವದ ವಾತಾವರಣವೇನಾದರೂ ಇದೆಯೋ ಎಂಬುದಾಗಿ ಲೋಟನು ವಿಚಾರಿಸಿದನು ಎಂಬುದನ್ನು ನಾವು ಯೋಚಿಸುವದಕ್ಕೆ ಕಾರಣವೇ ಇರುವದಿಲ್ಲ. ಆತನು ಆತ್ಮೀಕವಾಗಿ ಆಳವಿಲ್ಲದವನಾಗಿದ್ದನು ಮತ್ತು ಆತನು ಕಣ್ಣಿಗೆ ಕಂಡಿದ್ದರ ಮೋಹಕ್ಕೊಳಗಾಗುವ ಮನುಷ್ಯನಾಗಿದ್ದನು ಎಂಬುದಾಗಿ ಕಥಾನಿರೂಪಣೆಯು ಸುಳಿವು ನೀಡುತ್ತದೆ. ಅಲ್ಲಿ ಅಡಗಿರಬಹುದಾದ ಯಾವದೇ ಅಪಾಯದ ಕುರಿತು ಯೋಚನೆಯನ್ನೇ ಮಾಡದವನಾಗಿ, ಲೋಟನು ಲೋಕದ ಜ್ಞಾನವನ್ನು ಅನುಸರಿಸಿದನು, ಅದು "ಸ್ವಾರ್ಥ ಚಿಂತನೆ"ಯ ಕಾರಣದಿಂದ ಜಗಳವನ್ನು ಹುಟ್ಟಿಸುವದಾಗಿದೆ (ನೋಡಿರಿ ಯಾಕೋಬ 3:13-16). ಆತನ ನಿರ್ಣಯವು ಅವನನ್ನು ಮತ್ತು ಅವನ ಕುಟುಂಬವನ್ನು ವಿನಾಶದ ಕಡೆಗೆ ನಡಿಸಿತ್ತು (19:1-38).

ಮುಖ್ಯವಾಗಿ ತನ್ನ ಬಗ್ಗೆಯೇ ಕಾಳಜಿಯುಳ್ಳವನಾಗಿ, ಲೋಟನು ಬಹಳಷ್ಟರ ಮಟ್ಟಿಗೆ ಏದೆನ್ ತೋಟದಲ್ಲಿದ್ದ ಪ್ರಥಮ ದಂಪತಿಗಳಂತೆಯೇ ಇದ್ದನು. ದೇವರು ಆದಾಮನಿಗೆ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದೆಂದು ಎಚ್ಚರಿಸಿದ್ದನು ಮತ್ತು ಆದಾಮನು ಮರಣದ ಗಂಡಾಂತರದ ಕುರಿತು ಹವ್ವಳಿಗೆ ಹೇಳಿದ್ದಾಗ್ಯೂ, ನಿಷೇಧಿಸಲ್ಪಟ್ಟಿದ್ದ ಹಣ್ಣು ಎಷ್ಟೊಂದು ಆಕರ್ಷಣೀಯವಾಗಿತ್ತೆಂದರೆ ಆಕೆಗೆ ಅದನ್ನು ತಿನ್ನದೆ ಇರುವದಕ್ಕಾಗಲಿಲ್ಲ. ಆದಾಮನಿಗೂ ಅದು ಸಾಧ್ಯವಾಗಲಿಲ್ಲ (3:6). ಈ ವಿಷಯದಲ್ಲಿ, ದೇವರಿಂದ ಬರುವಂಥ ಜ್ಞಾನಕ್ಕಿಂತಲೂ ಅಧಿಕವಾಗಿ ಲೋಕದ (ಸರ್ಪದ) ಜ್ಞಾನವನ್ನು ಇಷ್ಟಪಟ್ಟರು. ಅದರ ಫಲಿತವಾಗಿ, ಅವರು ಏದೆನ್ ತೋಟದಿಂದ ಓಡಿಸಲ್ಪಟ್ಟರು (3:22-24).

ಹಳೆಯ ಒಡಂಬಡಿಕೆಯಲ್ಲಿನ ಇತರರು ತಾವು ಏನನ್ನು "ನೋಡಿ"ದರೋ ಅದರಿಂದ ಪ್ರಲೋಭನೆಗೆ ಒಳಗಾಗಿದ್ದರಿಂದಾಗಿ ಶೋಧಿಸಲ್ಪಟ್ಟು ಬಿದ್ದು ಹೋದರು. "ದೇವಪುತ್ರರು" "ಮನುಷ್ಯಪುತ್ರಿಯರ"ನ್ನು ನೋಡಿ ಅವರನ್ನು ಇಷ್ಟರಾದವರನ್ನು ಮದುವೆ ಮಾಡಿಕೊಂಡರು. ಇದು ದುಷ್ಟತನ, ಹಿಂಸೆ, ಮತ್ತು ಲೋಕದ ನಾಶನಕ್ಕೆ ದಾರಿ ಮಾಡಿ ಕೊಟ್ಟಿತು (6:1-7, 11-13). ಅದೇ ರೀತಿಯಲ್ಲಿಯೇ, ಆಕಾನನು ನಿಷೇಧಿಸಲ್ಪಟ್ಟ ಬೆಳ್ಳಿ ಮತ್ತು ಬಂಗಾರದ ವಸ್ತುಗಳನ್ನು ಯೆರಿಕೋವಿನಲ್ಲಿ ನೋಡಿದನು; ಆತನು ಶೋಧನೆಗೆ ಒಳಪಟ್ಟನು ಮತ್ತು ಅವುಗಳನ್ನು ಕದ್ದುಕೊಂಡನು, ಹೀಗೆ ತನ್ನ ಹಾಗೂ ತನ್ನ ಕುಟುಂಬದ ಮೇಲೆ ನಾಶನವನ್ನು ತಂದುಕೊಂಡನು (ಯೆಹೋಶುವ 7:19-26). ಅರಸನಾದ ದಾವೀದನು ತನ್ನ ಅರಮನೆಯ ಮೇಲ್ಛಾವಣಿಯಿಂದ ಕೆಳಕ್ಕೆ ನೋಡಿದಾಗ ಒಬ್ಬ ಸುಂದರವಾದ ಸ್ತ್ರೀಯು (ಬಹುಶಃ ಆಕೆಯ ಮನೆಯ

ಒಳಗಡೆಯಲ್ಲಿದ್ದ ಆವರಣದಲ್ಲಿನ ಮಧ್ಯಭಾಗದಲ್ಲಿ ಇರಬಹುದು, ಅದು ಮೇಲ್ಗಡೆಯಲ್ಲಿ ತೆರೆದದ್ದಾಗಿ ಇದ್ದಿರಬಹುದು) ಸ್ನಾನ ಮಾಡುತ್ತಿರುವದನ್ನು ಕಂಡನು, ಆತನ ಹೃದಯದಲ್ಲೊಂದು ಅಭಿಲಾಷೆಯು ಎಬ್ಬಿಸಲ್ಪಟ್ಟಿತು. ಈ ಅಭಿಲಾಷೆಗೆ ಒಳಗಾಗಿದ್ದರಿಂದ ಅದು ವ್ಯಭಿಚಾರಕ್ಕೆ ದಾರಿ ಮಾಡಿತ್ತು, ಆಕೆಯ ಗಂಡನ ಕೊಲೆಗೆ, ಮತ್ತು ದುಃಖಕ್ಕೆ ಮತ್ತು ಸ್ವತಃ ದಾವೀದನ ಕುಟುಂಬದಲ್ಲಿ ಮರಣ ಇವುಗಳಿಗೆ ಕಾರಣವಾಗಿತ್ತು (2 ಸಮುವೇಲ 11:1-12:23).

## ಜಗಳದ ಸಮಸ್ಯೆ (13:7, 8)

ಈ ಕೆಳಗಿನವುಗಳು ಶಾಸ್ತ್ರಗಳಲ್ಲಿ ಕಾಣಲ್ಪಡುವಂತಹ ವಿವಿಧ ಸಂಬಂಧಗಳೊಳಗೆ ಜಗಳಕ್ಕಿರುವ ವಿನಾಶಕಾರಿ ಸ್ವಭಾವದ ದೃಷ್ಟಾಂತಗಳಾಗಿರುತ್ತವೆ:

*ದಾಂಪತ್ಯದಲ್ಲಿ* - ಅಬ್ರಹಾಮ, ಸಾರಳು ಮತ್ತು ಹಾಗರಳು (16:1-9; 21:8-12); ಯಾಕೋಬ, ರಾಹೇಲ ಮತ್ತು ಲೇಯಳು (29:21-30:24).

*ಕುಟುಂಬಗಳಲ್ಲಿ* - ಕಾಯಿನ ಮತ್ತು ಹೇಬೆಲ (4:1-15; 1 ಯೋಹಾನ 3:10-14); ಯಾಕೋಬ ಮತ್ತು ಏಸಾವ (25:22-34; 27:1-45); ಯೋಸೇಫ ಮತ್ತು ಆತನ ಅಣ್ಣಂದಿರು (37:2-28).

*ಸಮಾಜಗಳಲ್ಲಿ* - ಇಸ್ರಾಯೇಲ್ಯರಲ್ಲಿನ ಗೋತ್ರಗಳಲ್ಲಿದ್ದ ಹೊಟ್ಟೆಕಿಚ್ಚು: ಮನಸ್ಸೇಯ ಗೋತ್ರದ ಗಿದ್ಯೋನನ ಬಗ್ಗೆ ಎಫ್ರಾಯೀಮನ ದೂರು (ನ್ಯಾಯಸ್ಥಾಪಕ 6:11-15; 8:1-21).

*ಸರ್ಕಾರಗಳಲ್ಲಿ* - ಅಬ್ಷಾಲೋಮನು ತನ್ನ ತಂದೆಯಾದ ದಾವೀದನಿಂದ ರಾಜ್ಯವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದು (2 ಸಮುವೇಲ 15:1-18:33); ದೇವರ ಜನರು ಇಸ್ರಾಯೇಲಿನ ಉತ್ತರ ರಾಜ್ಯ ಮತ್ತು ಯೆಹೂದದ ದಕ್ಷಿಣ ರಾಜ್ಯ ಎಂಬುದಾಗಿ ದುರಂತಕರವಾದ ವಿಭಜನೆ (1 ಅರಸು 12:1-33).

*ಸಭೆಯಲ್ಲಿ* - ಹೊಟ್ಟೆಕಿಚ್ಚು ಹಾಗೂ ಸ್ವಾರ್ಥಪರ ಜನರು ತಮ್ಮಿಷ್ಟದಂತೆ ಆಗಬೇಕೆಂದು ಬೇಡಿಕೆಯಿಡುವುದು, ರೋಮಾಪುರದಲ್ಲಿ (ರೋಮಾ 12:16-18; 13:13-15:7) ಮತ್ತು ಕೊರಿಂಥದಲ್ಲಿ ಹೀಗೆಯೇ ಆಗಿತ್ತು (1 ಕೊರಿಂಥ 3:1-5, 21-23; 4:1-21; 8:1-3; 13:1-13).

## ದೇವರಲ್ಲಿ ಅಬ್ರಹಾಮನ ವಿಶ್ವಾಸ (13:14-18)

ದೇವರು ದೇಶದ ವಾಗ್ದಾನವನ್ನು ನವೀಕರಿಸಿದ ವೇಳೆ ಅಬ್ರಹಾಮನ ನಂಬಿಕೆಯು ದೇವರಿಂದ ಘನಪಡಿಸಲ್ಪಟ್ಟಿತು. 13:2-12ರಲ್ಲಿನ ಕಥನವು ಲೋಟನನ್ನು ಅಬ್ರಹಾಮನು ತನ್ನ ಮಗನಂತೆ ಪ್ರೀತಿಸಿದನು ಎಂಬುದನ್ನು ತೋರಿಸಿ ಕೊಡುತ್ತದೆ. ಅಬ್ರಹಾಮನು ತನ್ನ ತಮ್ಮ ಹಾಗೂ ಲೋಟನ ತಂದೆಯಾದ ಹಾರಾನನ ಮರಣದ ಬಳಿಕ, ಲೋಟನನ್ನು ತನ್ನ ಆರೈಕೆಯಲ್ಲಿ ತೆಗೆದುಕೊಂಡನು ಎಂಬುದು ಸ್ಪಷ್ಟವಾಗಿರುತ್ತದೆ. ಅಬ್ರಹಾಮನು ಲೋಟನನ್ನು ಕಾನಾನಿನ ಪ್ರಯಾಣದಲ್ಲಿ ತನ್ನೊಂದಿಗೆ ಕರೆದುಕೊಂಡ ಬಂದನು, ದೇವರು ಆತನಿಗೆ ಬಂಧುಗಳನ್ನೆಲ್ಲಾ ಹಾರಾನಿನಲ್ಲಿಯೇ ಬಿಟ್ಟು ಬರಬೇಕೆಂದು ಹೇಳಿದಾಗ್ಯೂ ಅವನನ್ನು ಕರೆದುಕೊಂಡು ಬಂದಿದ್ದನು. ಆತನು ತನ್ನ ಆಸ್ತಿಯಲ್ಲಿ ಸಾಕಷ್ಟು ಮೊತ್ತದ ಸ್ವತ್ತನ್ನು ಸಹೋದರನ ಮಗನೊಂದಿಗೆ ಹಂಚಿಕೊಂಡಿರಬಹುದಾಗಿದೆ, ಮತ್ತು ತಾನು ಹಾಗೂ ತನ್ನ ಜನರು ನೆಲೆಸಲಿದ್ದಂಥ ವಾಗ್ದಾನ ದೇಶದಲ್ಲಿ ತನಗಿಷ್ಟವಾದ ಪ್ರಾಂತ್ಯವನ್ನು ಆರಿಸಿಕೊಳ್ಳುವಂತೆ ಆತನು ಲೋಟನಿಗೆ ಮೊದಲ ಆಯ್ಕೆಯನ್ನು ನೀಡಿದ್ದನು. ಲೋಟನು ತನ್ನ ಜನರನ್ನು ಮತ್ತು ಸ್ವತ್ತುಗಳನ್ನು ತೆಗೆದುಕೊಂಡು ಹೊರಟು ಹೋದ ನಂತರದಲ್ಲಿ, ಸಹಜವಾಗಿಯೇ

ಅಬ್ರಹಾಮನು ಶೂನ್ಯತೆಯನ್ನು ಅನುಭವಿಸಿದನು ಮತ್ತು ಆತನಿಗೆ ಸಂತೈಸುವಿಕೆಯ ಅಗತ್ಯವಿತ್ತು.

ಮೂಲಪಿತೃವು ಈಗಾಗಲೇ ತನ್ನ ಜೀವಿತದಲ್ಲಿ ಸ್ವಾರ್ಥದಿಂದ ನಡೆದುಕೊಂಡು ಐಗುಪ್ತದಲ್ಲಿ ಸಾರಳ ಬಗ್ಗೆ ಸುಳ್ಳಾಡಿದ ವೇಳೆ ಹಿನ್ನಡೆಯನ್ನು ಅನುಭವಿಸಿದ್ದನು. ಈ ಸಾರಿ, ಯೋರ್ದನ್ ಕಣಿವೆಯ ಫಲವತ್ತಾದ ಭೂಮಿಯನ್ನು ಆರಿಸಿಕೊಳ್ಳುವಂತೆ ಲೋಟನಿಗೆ ಬಿಟ್ಟು ಕೊಡುವ ಮೂಲಕ ಅತ್ಯಮೋಘವಾದ ಕಾರ್ಯವನ್ನು ಮಾಡಿದ್ದನು; ಆದಾಗ್ಯೂ, ಲೋಟನ ಪರಿವಾರವು ಹೊರಟು ಹೋಗುವದನ್ನು ನೋಡುತ್ತಿರುವ ವೇಳೆ, ಬಹುಶಃ ಆತನು ಮತ್ತೊಂದು ನಿರಾಶೆಯ ಕಾಲವನ್ನು ಪ್ರವೇಶಿಸಿದನು ಎಂದು ತೋರುತ್ತದೆ. ಅಂತೂ, ತನಗೆ ಮಗನಂತೆ ಇದ್ದ ವ್ಯಕ್ತಿಯೊಬ್ಬನನ್ನು ಆತನು ಕಳೆದುಕೊಳ್ಳಲಿದ್ದನು, ಮಾತ್ರವಲ್ಲದೆ ಕಾನಾನ್ ದೇಶದ ಅತ್ಯುತ್ತಮ ಭಾಗವೆಂದು ತೋರುವಂಥ ಪ್ರಾಂತ್ಯವನ್ನು ಸಹ ಕಳೆದುಕೊಳ್ಳಲಿದ್ದನಷ್ಟೆ.

ಅಬ್ರಹಾಮನ ಹೃದಯದಲ್ಲಿದ್ದ ಶೂನ್ಯತೆಯನ್ನು ದೇವರು ತಿಳಿದಿದ್ದನು, ಮತ್ತು ಮೂಲಪಿತೃವು ಆತನ ಮುಂದೆ ಬರುವ ವರೆಗೂ ಕಾಯಲಿಲ್ಲ. ಈ ಸಂದರ್ಭದಲ್ಲಿ, ಯೆಹೋವನೇ ಆತನ ಬಳಿಗೆ ಬಂದು ಹೀಗೆ ಹೇಳಿದನು, "ನೀನು ... ಕಣ್ಣೆತ್ತಿ ನೋಡು." ಲೋಟನು "ಕಣ್ಣೆತ್ತಿ ನೋಡಲಾಗಿ"ದ್ದಕ್ಕೆ ತದ್ವಿರುದ್ಧವಾಗಿ, ಯೆಹೋವನು ಅಬ್ರಹಾಮನಿಗೆ "ನೋಡು" ಎಂದು ಕರೆ ಕೊಟ್ಟನು, ಆದರೆ ಲೋಟನು ಕೇವಲ "ನೋಡಿದ್ದನು" (13:10, 14). ಲೋಟನು ತನಗೋಸ್ಕರ ಫಲವತ್ತಾದ ಯೋರ್ದನ್ ಕಣಿವೆಯನ್ನು "ಆದುಕೊಂಡನು" ಎಂದು ವಾಕ್ಯವು ತಿಳಿಸುತ್ತದೆ (13:11); ಆದರೆ ಅಬ್ರಹಾಮನಿಗೆ ಸಿಕ್ಕ ದೇಶದ ಭಾಗವು ತಾನು ಆತನಿಗೆ ಕೊಟ್ಟಿರುವ ಒಂದು ಬಹುಮಾನ ಎಂಬುದಾಗಿ ದೇವರು ಒತ್ತಿ ಹೇಳಿದನು. ಯೆಹೋವನು ಅಬ್ರಹಾಮನಿಗೆ ಹೀಗೆ ಹೇಳಿದನು, "ನೀನು ನೋಡುವ ಈ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತವಾಗಿ ಕೊಡುವೆನು" (13:15).

ಅಬ್ರಹಾಮನು ನಂಬಿಕೆಯ ಇನ್ನೊಂದು ಸಮಸ್ಯೆಯಲ್ಲಿ ಸಿಲುಕಿ ಹೋರಾಡುತ್ತಿರುವಂತೆ ಕಂಡಾಗ, ದೇವರು ಆತನನ್ನು ಧೈರ್ಯಪಡಿಸಿದನು. ಆತನು ಮೂಲಪಿತೃವಿಗೆ ದೇಶದ ವಾಗ್ದಾನವನ್ನು ಪುನರುಚ್ಚರಿಸಿದನು, ಲೋಟನು ಯೋರ್ದನ್ ಕಣಿವೆಯನ್ನು ಆರಿಸಿಕೊಂಡಿದ್ದು ಯಾವ ವಿಧದಲ್ಲಿಯೂ ತಾನು ಅಬ್ರಹಾಮನಿಗೂ ಆತನ ಸಂತತಿಯವರಿಗೂ ಮಾಡಿದ್ದ ಪ್ರತಿಜ್ಞೆಯನ್ನು ಇಕ್ಕಟ್ಟಿಗೆ ಸಿಲುಕಿಸುವದಿಲ್ಲ ಎಂಬ ಭರವಸವನ್ನು ಆತನಿಗೆ ಕೊಟ್ಟನು. ಸ್ಪಷ್ಟವಾಗಿರುವಂತೆ, ಅನಂತರದ ಇತಿಹಾಸದಲ್ಲಿ, ಲೋಟನ ಸಂತತಿಯವರು - ಮೋವಾಬ್ಯರು ಮತ್ತು ಅಮ್ಮೋನಿಯರು - ಕಾನಾನ್ ದೇಶದ ವಾಸ್ತವಿಕ ಭೂಮಿಯಲ್ಲಿ ನೆಲೆಸುವದಿಲ್ಲ ಎಂಬುದನ್ನು ಮೂಲಪಿತೃವಿಗೆ ಪ್ರಕಟಗೊಳಿಸುವ ಅಗತ್ಯವಿಲ್ಲವೆಂದು ಯೆಹೋವನು ಕಂಡನು. ಅವರು ಯೋರ್ದನ್ ನದಿ ಮತ್ತು ಮೃತ ಸಮುದ್ರದ ಪೂರ್ವ ದಿಕ್ಕಿನಲ್ಲಿ ವಾಸಿಸುವವರಾಗಿದ್ದರು. ಈ ಸಂದರ್ಭದಲ್ಲಿ, ತನಗೆ ಮಾಡಲಾಗಿರುವ ದೇಶದ ವಾಗ್ದಾನವು ಈಗಲೂ ದೃಢವಾಗಿದೆ ಮತ್ತು ತನ್ನ ದೈನಂದಿನ ಜೀವನದಲ್ಲಿ ಎದುರಾಗುವವರಿಗೆಲ್ಲಾ ಒಂದು ಆಶೀರ್ವಾದವಾಗಿರಬೇಕೆಂಬ ಆದೇಶದೊಂದಿಗೆ ಅಬ್ರಹಾಮನು ಮುನ್ನಡೆಯಬೇಕು ಎಂಬುದು ಆತನ ಬಯಕೆಯಾಗಿತ್ತು. ದೇಶದ ವಾಗ್ದಾನವು ನವೀಕರಿಸಲ್ಪಟ್ಟಿದ್ದಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ, ಅಬ್ರಹಾಮನು ಕೃತಜ್ಞತೆಯುಳ್ಳವನಾಗಿ ಇನ್ನೊಂದು ಯಜ್ಞವೇದಿಯನ್ನು ನಿರ್ಮಿಸಿ ಯೆಹೋವನನ್ನು ಆರಾಧಿಸಿದನು (13:18).

## ಅಡಿಟಿಪ್ಪಣಿಗಳು

[1]John H. Walton, Victor H. Matthews, and Mark W. Chavalas, *The IVP Bible Background Commentary: Old Testament* (Downers Grove, Ill.: InterVarsity Press, 2000), 44–45. [2]"ಕಾನಾನ್ಯರು" ("ವರ್ತಕರು" ಪಟ್ಟಣದಲ್ಲಿ ವಾಸಿಸಿದರೆ, "ಪೆರಿಜೀಯರು" ("ಗ್ರಾಮಸ್ಥರು") ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದರು ಎಂದು ಅಭಿಪ್ರಾಯ ಪಡಲಾಗಿರುತ್ತದೆ. ಹೇಗೂ, "ಪೆರಿಜೀಯರು" ಎಂಬುದನ್ನು ಈ ವಿಧದಲ್ಲಿ ಅರ್ಥಮಾಡಿಕೊಳ್ಳಬೇಕೋ ಎಂಬುದು ಖಚಿತವಾಗಿರುವದಿಲ್ಲ; ಈ ಪದವು ಪ್ರಾಥಮಿಕವಾಗಿ ಒಂದು ಜನಾಂಗೀಯ ಗುಂಪನ್ನು ಸೂಚಿಸುತ್ತದೆ. [3]Gordon J. Wenham, *Genesis 1—15*, Word Biblical Commentary, vol. 1 (Waco, Tex.: Word Books, 1987), 297. [4]12 ಮತ್ತು 34 ನಕ್ಷೆಗಳನ್ನು Yohanan Aharoni and Michael Avi-Yonah, *The Macmillan Bible Atlas*, 3d ed. (New York: Macmillan Publishing Co., 1993), 19, 36ರಲ್ಲಿ ನೋಡಿರಿ. [5]ಹಲವಾರು ತರ್ಜುಮೆಗಳು "ನೀನು ಚೋಗರೂರಿನ ಕಡೆಗೆ ಹೋಗುವಾಗ" ಎಂಬ ಪದಗುಚ್ಛವನ್ನು ಈ ವಚನದ ಆರಂಭಕ್ಕೆ ಸ್ಥಳಾಂತರಿಸಿರುತ್ತವೆ (NJPSV; NEB; REB; NAB; TEV; CEV). NLTಯು ಹೀಗೆ ಹೇಳುತ್ತದೆ, "ಲೋಟನು ಚೋಗರೂರಿನ ದಿಕ್ಕಿನಲ್ಲಿರುವ ಯೋರ್ದನ್ ಕಣಿಯೆ ಫಲವತ್ತಾದ ಬಯಲುಗಳನ್ನು ಸುದೀರ್ಘವಾಗಿ ನೋಡಿದನು." [6]Martin J. Mulder, "Sodom and Gomorrah," in *The Anchor Bible Dictionary*, ed. David Noel Freedman (New York: Doubleday, 1992), 6:101–2ರಲ್ಲಿ ಚರ್ಚೆಯನ್ನು ನೋಡಿರಿ. [7]*ಒಲಾಮ* ಎಂಬುದರ ಅರ್ಥವು ದೇವರು ಮತ್ತು ಆತನ ಗುಣಸ್ವಭಾವಗಳ ವಿಷಯದಲ್ಲಿ "ಶಾಶ್ವತವಾಗಿ" ಅಥವಾ "ನಿತ್ಯಕ್ಕೂ" ಎಂದಾಗಿರಬಲ್ಲದಾದರೂ, ಈ ಪದವು "ಶಾಶ್ವತವಾಗಿ" ಎಂಬ ಅರ್ಥವಿರುವದಕ್ಕೆ ಸಾಧ್ಯವಿಲ್ಲದಂಥ ಸನ್ನಿವೇಶಗಳೊಳಗೆ ಸಹ ಬಳಸಲ್ಪಡುತ್ತದೆ. ನೋಡಿರಿ *ಅನ್ವಯಿಸುವಿಕೆ: "ಶಾಶ್ವತವಾದ ಒಡಂಬಡಿಕೆ,"* ಪುಟಗಳು 95-100. [8]ಈ ಆಚಾರ ಮತ್ತು ಅದರ ಮೂಲಗಳ ಕುರಿತಾದ ಚರ್ಚೆಗಾಗಿ, ನೋಡಿರಿ Bruce K. Waltke, *Genesis: A Commentary* (Grand Rapids, Mich.: Zondervan Publishers, 2001), 222–23. [9]ಸ್ವತಃ ಹೆಬ್ರೋನ್ ಪಟ್ಟಣವು ಯೆರೂಸಲೇಮಿನಿಂದ ದಕ್ಷಿಣ-ನೈಋತ್ಯಕ್ಕೆ ಸುಮಾರು ಇಪ್ಪತ್ತು ಮೈಲಿಗಳಷ್ಟು ದೂರದಲ್ಲಿತ್ತು.